ST ALOYSIUS

(DEEMED TO BE UNIVERSITY)

ESTD : 1880

MANGALURU, KARNATAKA 575003 - INDIA

# NEWS CLIPPINGS

Samyukta Karnataka 25-7-2025

## ನಿರಂತರ ಭರತ ನಾಟ್ಯದ ಮೂಲಕ ದಾಖಲೆಗೆ ಮುಂದಾಗಿರುವ ರೆಮೋನಾ

**ಸಂ.ಕ.ಸಮಾಚಾರ, ಮಂಗಳೂರು**

ನಿರಂತರ ಭರತ ನಾಟ್ಯ ಪ್ರದರ್ಶನದ ಮೂಲಕ ದಾಖಲೆಗೆ ಮುಂದಾಗಿದ್ದಾರೆ ರೆಮೋನಾ ಪಿರೇರಾ.

ಏಳು ದಿನಗಳ ಕಾಲ ನಿರಂತರ ನೃತ್ಯದೊಂದಿಗೆ 170 ಗಂಟೆ ಸತತ ಭರತನಾಟ್ಯ ಪ್ರದರ್ಶನದ ಮೂಲಕ ದಾಖಲೆ ನಿರ್ಮಿಸುವುದು ರೆಮೋನಾ ಗುರಿ.

ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಅಂತಿಮ ಬಿ.ಎ.ವಿದ್ಯಾರ್ಥಿನಿ ರೆಮೋನಾ ಪಿರೇರಾ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆಗೈಯಲು ಈ ನೃತ್ಯ ಮಾಡುತ್ತಿದ್ದಾರೆ. ಜು.21ರಂದು ಬೆಳಗ್ಗೆ 10.30ರಿಂದ ಸಂತ ಅಲೋಶಿಯಸ್ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಭರತನಾಟ್ಯ ಪ್ರದರ್ಶನ ಆರಂಭಿಸಿದ್ದಾರೆ. ಜು.28ರ ವರೆಗೆ ನಿರಂತರವಾಗಿ ನಾಟ್ಯ ನಡೆಯಲಿದೆ.

ಭರತನಾಟ್ಯದ ವಿವಿಧ ನಡೆಗಳಾದ ಅಲರಿಪ್ಪು, ಜತಿಸ್ವರಂ, ಶಬ್ದಂ, ವರ್ಣಂ, ಪದಂ, ತಿಲ್ಲಾನಗಳ ಜತೆಗೆ ಸೆಮಿಕ್ಲಾಸಿಕ್, ದೇವರ ನಾಮಗಳಿಗೆ ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. 61 ಪದ್ಯವನ್ನು 3 ಗಂಟೆಗಳಿಗೊಂದರಂತೆ ಜೋಡಿಸಲಾಗುತ್ತದೆ.

ರಾತ್ರಿ-ಹಗಲೆನ್ನದೆ ದಿನವಿಡೀ ಭರತನಾಟ್ಯ ಪ್ರದರ್ಶನ ನಡೆಯಲಿದ್ದು, ಪ್ರತೀ ಮೂರು ಗಂಟೆಗೊಮ್ಮೆ 15 ನಿಮಿಷಗಳ ಕಾಲ ಮಾತ್ರ ವಿರಾಮ ಇರುತ್ತದೆ. ಈ ಅವಧಿಯಲ್ಲಿ ಕೇವಲ ಮಿತ ಆಹಾರವಷ್ಟೇ ಸೇವನೆ ಮಾಡುತ್ತಾರೆ.

'ರೆಮೋನಾ ಅವರು ಈ ಸಾಧನೆಗೈಯಲು ಪ್ರತೀ ದಿನ ಸುಮಾರು 5ರಿಂದ 6 ಗಂಟೆಗಳ ಕಾಲ ಭರತನಾಟ್ಯ ಅಭ್ಯಸಿಸುತ್ತಿದ್ದಾರೆ. ನಗರ ಗ್ಲಾಡಿಸ್ ಪಿರೇರ ಅವರ ಪುತ್ರಿಯಾಗಿರುವ ರೆಮೋನಾ



ಭರತನಾಟ್ಯದಲ್ಲಿ 2017ರಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್, 2017ರಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್-ಲಂಡನ್, ಭಾರತ್ ಬುಕ್ ಆಪ್ ವರ್ಲ್ಡ್ ರೆಕಾರ್ಡ್‌ನಲ್ಲಿ ತನ್ನ ಹೆಸರು ನಮೂದಿಸಿ ಕೊಂಡಿದ್ದಾರೆ. ಪ್ರಧಾನಮಂತ್ರಿ ಅತ್ಯುನ್ನತ ಬಾಲ ಪುರಸ್ಕಾರವನ್ನು ಪಡೆದುಕೊಂಡಿದ್ದಾರೆ. ಸದ್ಯ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವುದು ದಾಖಲೆ ಇದೆ. 16 ವರ್ಷದ ಲಾತೂರ್ನ ಸುಧೀರ್ ಜಗಪತ್ ಅವರು 2023ರಲ್ಲಿ ಈ ಸಾಧನೆಗೈದಿದ್ದಾರೆ. ಈ ಮೂಲಕ ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆಗೈದಿದ್ದಾರೆ.



ESTD : 1880

Udayavani 24-7-2025

**7 ದಿನಗಳ ಕಾಲದ ಪ್ರದರ್ಶನ ಆರಂಭ | 3 ಗಂಟೆಗೊಮ್ಮೆ 15 ನಿಮಿಷ ವಿಶ್ರಾಂತಿ ಪಡೆಯುವ ರೆಮೋನಾ**

# ನಿರಂತರ 170 ಗಂಟೆ ಭರತನಾಟ್ಯ: ವಿಶ್ವದಾಖಲೆಯತ್ತ ಹೆಜ್ಜೆ

**ಮಹಾನಗರ, ಜು. 23:** ಏಳು ದಿನಗಳ ಕಾಲ ನಿರಂತರ ನೃತ್ಯದೊಂದಿಗೆ 170 ಗಂಟೆ ಸತತ ಭರತನಾಟ್ಯ ಪ್ರದರ್ಶನದ ದಾಖಲೆಗೆ ಮಂಗಳೂರಿನ ವಿದ್ಯಾರ್ಥಿನಿ ರೆಮೋನಾ ಪಿರೇರಾ ಹೆಜ್ಜೆ ಹಾಕುತ್ತಿದ್ದಾರೆ.

ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಅಂತಿಮ ಬಿ.ಎ. ವಿದ್ಯಾರ್ಥಿನಿ ರೆಮೋನಾ ಪಿರೇರಾ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆಗೈಯಲು ಈ ನೃತ್ಯ ಮಾಡುತ್ತಿದ್ದಾರೆ. ಜು. 21ರಂದು ಬೆಳಗ್ಗೆ 10.30ರಿಂದ ಸಂತ ಅಲೋಶಿಯಸ್ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಭರತನಾಟ್ಯ ಪ್ರದರ್ಶನ ಆರಂಭಿಸಿದ್ದಾರೆ. ಜು. 28ರ ವರೆಗೆ ನಿರಂತರವಾಗಿ ನಾಟ್ಯ ನಡೆಯಲಿದೆ.

ಭರತನಾಟ್ಯದ ವಿವಿಧ ನಡೆಗಳಾದ ಅಲರಿಪ್ಪು, ಜತಿಸ್ವರಂ, ಶಬ್ದಂ, ವರ್ಣಂ, ಪದಂ, ತಿಲ್ಲಾನಗಳ ಜತೆಗೆ ಸೆಮಿಕ್ಲಾಸಿಕ್, ದೇವರನಾಮಗಳಿಗೆ ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. ಅದಕ್ಕೆ ತಕ್ಕಂತೆ ಹಾಡುಗಳ ರೆಕಾರ್ಡ್‌ಗಳನ್ನು ಬಳಸುತ್ತಿದ್ದಾರೆ. 61 ಪದ್ಯವನ್ನು 3 ಗಂಟೆಗಳಿಗೊಂದರಂತೆ ಜೋಡಿಸಲಾಗುತ್ತದೆ.



**3 ಗಂಟೆಗೆ 15 ನಿಮಿಷ ವಿರಾಮ!**

ರಾತ್ರಿ-ಹಗಲೆನ್ನದೆ ದಿನವಿಡೀ ಭರತನಾಟ್ಯ ಪ್ರದರ್ಶನ ನಡೆಯಲಿದ್ದು ಪ್ರತೀ ಮೂರು ಗಂಟೆಗೊಮ್ಮೆ 15 ನಿಮಿಷಗಳ ಕಾಲ ಮಾತ್ರ ವಿರಾಮ ಇರುತ್ತದೆ. ಈ ಅವಧಿಯಲ್ಲಿ ಕೇವಲ ಮಿತ ಆಹಾರವಷ್ಟೇ ಸೇವನೆ ಮಾಡುತ್ತಾರೆ. ಮುಖ್ಯವಾಗಿ ಬಾಳೆಹಣ್ಣು, ಮೊಸರು, ಎಳನೀರು, ಚೆನ್ನಾಗಿ ಬೇಯಿಸಿದ ಬೆಳ್ತಿಗೆ ಅನ್ನ ಸೇವಿಸುತ್ತಿದ್ದಾರೆ. ಇದಕ್ಕೆಂದು ಆಹಾರ ಕ್ರಮವನ್ನು ಹಲವು ತಿಂಗಳುಗಳಿಂದ ಅಭ್ಯಾಸ ಮಾಡುತ್ತಿದ್ದಾರೆ.

## 13 ವರ್ಷಗಳಿಂದ ಅಭ್ಯಾಸ

ರೆಮೋನಾ ಪಿರೇರಾ ಅವರು 13 ವರ್ಷಗಳಿಂದ ಯೆಯ್ಯಾಡಿ ಸೌರಭ ಕಲಾಪರಿಷತ್ತಿನ ಡಾ| ಶ್ರೀವಿದ್ಯಾ ಅವರಲ್ಲಿ ಭರತನಾಟ್ಯ ಕಲಿಯುತ್ತಿದ್ದಾರೆ. "ರೆಮೋನಾ ಅವರು ಈ ಸಾಧನೆಗೈಯಲು ಪ್ರತೀ ದಿನ ಸುಮಾರು 5ರಿಂದ 6 ಗಂಟೆಗಳ ಕಾಲ ಭರತನಾಟ್ಯ ಅಭ್ಯಸಿಸುತ್ತಿದ್ದರು. ಬೆಳಗ್ಗೆ 6 ಗಂಟೆಯಿಂದ 7.30ರವರೆಗೆ ಅಭ್ಯಸಿಸಿ, ಕಾಲೇಜಿಗೆ ತೆರಳುತ್ತಿದ್ದರು. ಸಂಜೆ 6 ಗಂಟೆಯಿಂದ 9 ಗಂಟೆಯವರೆಗೆ ಮತ್ತೆ ಅಭ್ಯಾಸ. ವಿದ್ಯೆಯ ಜತೆ ಭರತನಾಟ್ಯಕ್ಕೂ ಸಮಾನ ಪ್ರಾಶಸ್ತ್ಯ ನೀಡುತ್ತಿದ್ದಾರೆ. ಇವಿಷ್ಟೇ ಅಲ್ಲದೆ, ಯಕ್ಷಗಾನ, ಪಾಶ್ಚಾತ್ಯ, ಸಮಕಾಲೀನ ನೃತ್ಯಗಳು, ಸಾಹಸ ನೃತ್ಯ ಮಾಡುತ್ತಾರೆ. ಸಾವಿರಕ್ಕೂ ಅಧಿಕ ವೇದಿಕೆಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಸದ್ಯ ಭರತನಾಟ್ಯದಲ್ಲಿ ವಿದ್ವತ್ ತಯಾರಿಯಲ್ಲಿದ್ದಾರೆ" ಎನ್ನುತ್ತಾರೆ ಡಾ| ಶ್ರೀ ವಿದ್ಯಾ.

## ರೆಮೋನಾ ಹೆಸರಲ್ಲಿ ಹಲವು ದಾಖಲೆಗಳು

ನಗರದ ಗ್ಲಾಡಿಸ್ ಪಿರೇರ ಅವರ ಪುತ್ರಿಯಾಗಿರುವ ರೆಮೋನಾ ಭರತನಾಟ್ಯದಲ್ಲಿ 2017ರಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್, 2017ರಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್-ಲಂಡನ್, 2017ರಲ್ಲಿ ಭಾರತ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ತನ್ನ ಹೆಸರು ನಮೂದಿಸಿಕೊಂಡಿದ್ದಾರೆ. ಪ್ರಧಾನ ಮಂತ್ರಿ ಅತ್ಯುನ್ನತ ಬಾಲ ಪುರಸ್ಕಾರವನ್ನು ಪಡೆದುಕೊಂಡಿದ್ದಾರೆ.

## 127 ಗಂಟೆಯೇ ಇದುವರೆಗಿನ ದಾಖಲೆ

ಸದ್ಯ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವುದು ದಾಖಲೆ ಇದೆ. 16 ವರ್ಷದ ಲಾತೂರ್‌ನ ಸುಧೀರ್ ಜಗಪತ್ ಅವರು 2023ರಲ್ಲಿ ಈ ಸಾಧನೆಗೈದಿದ್ದಾರೆ. ಈ ಮೂಲಕ ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆಗೈದಿದ್ದಾರೆ.

Varthabharathi 24-7-2025

# ಭರತನಾಟ್ಯ: ನೂತನ ದಾಖಲೆಯತ್ತ ರೆಮೋನ ಪಿರೇರ

## 7 ದಿನಗಳ ಸತತ ನೃತ್ಯ ಪ್ರದರ್ಶನ

ಮಂಗಳೂರು, ಜು.23: ವಿವಿಧ ಶೈಲಿಯ ನೃತ್ಯಗಳ ಮೂಲಕ ಈಗಾಗಲೇ ವಿಶ್ವದ ಗಮನ ಸೆಳೆದಿರುವ, ಹಲವು ದಾಖಲೆಗಳ ಮೂಲಕ ಗುರುತಿಸಿಕೊಂಡಿರುವ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ರೆಮೊನಾ ಎವೆಟ್ ಪಿರೇರ ಇದೀಗ ಭರತನಾಟ್ಯದಲ್ಲಿ 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್'ಗಾಗಿ ಹೆಜ್ಜೆ ಹಾಕುತ್ತಿದ್ದಾರೆ.

ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನ ಪ್ರಕ್ರಿಯೆ ಸಂತ ಅಲೋಶಿಯಸ್ ಕಾಲೇಜಿನ ಎಲ್‌ಸಿಆರ್‌ಐ ರಾಬರ್ಟ್ ಸಿಕ್ವೇರ ಸಭಾಂಗಣದಲ್ಲಿ ಜು.21ರಿಂದ ಈ ಪ್ರದರ್ಶನ ಆರಂಭಗೊಂಡಿದ್ದು, ಜು.27ರವರೆಗೆ ನಡೆಯಲಿದೆ. ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನ ನಿಯಮದಂತೆ, (ಕಳೆದ 3 ದಿನಗಳಿಂದ ಕೆಲ ಗಂಟೆಗಳ ನಡುವೆ ಕೆಲ ನಿಮಿಷಗಳ ವಿರಾಮ ಮಾತ್ರ) ನಿದ್ದೆ, ವಿರಾಮವಿಲ್ಲದೆ ರೆಮೋನ ಭರತನಾಟ್ಯ ಪ್ರದರ್ಶನ ನೀಡುತ್ತಿದ್ದಾರೆ.

ತನ್ನ 3ರ ಹರೆಯದಲ್ಲೇ ನೃತ್ಯದ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದ ರೆಮೋನಾ 14 ವರ್ಷಗಳಿಂದ ಡಾ. ಶ್ರೀವಿದ್ಯಾ ಮುರಳೀಧರ್‌ರಿಂದ ಭರತನಾಟ್ಯ ಕಲಿ ಯುತ್ತಿದ್ದಾರೆ. 2019ರಲ್ಲಿ ಭರತನಾಟ್ಯ ರಂಗ ಪ್ರವೇಶ ವನ್ನು ಮಾಡಿರುವ ರೆಮೋನ ಶಾಸ್ತ್ರೀಯ ನೃತ್ಯ, ಅರೆ ಶಾಸ್ತ್ರೀಯ, ಹಿಪಾಪ್, ಲ್ಯಾಟಿನ್, ಆಕ್ರೋಬ್ಯಾಟಿಕ್ಸ್, ಬಾಲಿವುಡ್, ಬಾಲ್‌ರೂಂ ಮೊದಲಾದ ನೃತ್ಯಗಳನ್ನು ಕರತಗತ ಮಾಡಿಕೊಂಡಿದ್ದಾರೆ. ಪ್ರಸಕ್ತ ಸಂತ ಅಲೋಶಿಯಸ್ ವಿವಿಯಲ್ಲಿ ಬಿಎ ಅಂತಿಮ ತರಗತಿಯ ವಿದ್ಯಾರ್ಥಿನಿಯಾಗಿದ್ದಾರೆ.



ರೆಮೋನ 2017ರಲ್ಲಿ ಲಂಡನ್‌ನಲ್ಲಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲೆ ಹೊಂದಿದ್ದಾರೆ. ಇದೀಗ ಇಂಡಿಯಾ ಬುಕ್ ಆಫ್ ರೆಕಾರ್ಡ್ ಹಾಗೂ ಭಾರತ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ್ನು ತನ್ನದಾಗಿಸಿಕೊಂಡಿದ್ದಾರೆ.

### ಪ್ರಶಸ್ತಿಗಳ ಸರಮಾಲೆ...

2016ರಲ್ಲಿ ರೆಮೋನಾ ಅವರು ಬೆಂಗಳೂರಿನಲ್ಲಿ ತನ್ನ ಚೊಚ್ಚಲ ಪ್ರಶಸ್ತಿ 'ಅರಳು ಮಲ್ಲಿಗೆ'ಯ ಮೂಲಕ ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ತನ್ನ ನೃತ್ಯ ಕಲೆಯನ್ನು ಪ್ರದರ್ಶಿಸಿ ಹೆಸರು ಪಡೆದಿದ್ದಾರೆ. 2022ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಂದ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ, ಟೆಡೆಕ್ಸ್‌ನಲ್ಲಿ ಅರೆ ಶಾಸ್ತ್ರೀಯ ನೃತ್ಯ ಪ್ರದರ್ಶನಕ್ಕಾಗಿ ಗೌರವ, 2021ರಲ್ಲಿ ರಾಜ್ಯ ಸರಕಾರದಿಂದ ಬಾಲ ಗೌರವ ಪ್ರತಿಷ್ಠ ಪುರಸ್ಕಾರ, 2017ರಲ್ಲಿ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರವನ್ನು ಪಡೆದಿರುವ ರೆಮೋನಾ, ಎಂಸಿಸಿ ಕತಾರ್ ಬೈಲಾ ಚಾಲೆಂಜ್ ಡುಯೆಟ್ ನೃತ್ಯ ಪ್ರದರ್ಶನದಲ್ಲಿ ಪ್ರಥಮ ಸ್ಥಾನದೊಂದಿಗೆ ಬೈಲಾ ಕ್ವೀನ್ ಬಿರುದನ್ನು ಪಡೆದಿದ್ದಾರೆ.

2019ರಲ್ಲಿ 'ಹಿಡನ್ ಐಡಲ್' ಗರಿಮೆಯನ್ನು ಗಳಿಸಿಕೊಂಡಿರುವ ರೆಮೋನಾ, 2020ರಲ್ಲಿ ರಾಷ್ಟ್ರ ಮಟ್ಟದ ರೂಪದರ್ಶಿ ಸ್ಪರ್ಧೆಯಲ್ಲಿ ದ್ವಿತೀಯ ರನ್ನರ್ ಆಗಿ, ಮಿಸ್ಟರ್ ಆಂಡ್ ಮಿಸಸ್ ಟೀನ್‌ನ ಮಿಸಸ್ ಐರನ್ ಲೇಡಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಅನಾಥ, ಲಿಂಗತ್ವ ಅಲ್ಪಸಂಖ್ಯಾತರಿಗೆ ಭಾರತೀಯ ನೃತ್ಯ ಕಲೆಗಳನ್ನು ಕಲಿಸುವ ಹಾಗೂ ಭರತನಾಟ್ಯದಲ್ಲಿ ಪಿಎಚ್‌ಡಿ ಮಾಡುವ ಗುರಿ ರೆಮೋನರದ್ದಾಗಿದೆ.

Vijayakarnataka 25-7-2025

7 ದಿನಗಳ ಕಾಲ 170 ಗಂಟೆ ಭರತನಾಟ್ಯ | 3 ಗಂಟೆಗೊಮ್ಮೆ 15 ನಿಮಿಷ ವಿಶ್ರಾಂತಿ

# ವಿಶ್ವದಾಖಲೆಯತ್ತ ರೆಮೋನಾ ಹೆಜ್ಜೆ

■ ಸ್ಫೂರ್ತಿ ವಿಟ್ಲ ಮಂಗಳೂರು
feedbackvkmng@gmail.com

ಭರತನಾಟ್ಯದಲ್ಲಿ ಕುಡ್ಲದ ಯುವತಿಯೊಬ್ಬರು ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಹೆಸರು ಭದ್ರ ಮಾಡಲು ಯೋಜನೆ ಹಾಕಿಕೊಂಡಿದ್ದಾರೆ.

ಹೌದು. ಸಂತ ಅಲೋಶಿಯಸ್ ಕಾಲೇಜಿನಲ್ಲಿ ತೃತೀಯ ಬಿಎ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ರೆಮೋನಾ ಎವೆಟ್ಟೆ ಪಿರೇರಾ ಜು.21ರಿಂದ 28ರವರೆಗೆ 7 ದಿನಗಳ ಕಾಲ 170 ಗಂಟೆ ಭರತನಾಟ್ಯ ಮೂಲಕ ಗೋಲ್ಡನ್ ಬುಕ್ ಆಫ್ ರೆಕಾರ್ಡ್ ಮಾಡಲು ಮುಂದಾಗಿದ್ದಾರೆ.

ಈ ಹಿಂದೆ 2023ರಲ್ಲಿ ಸೃಷ್ಟಿ ಸುಧೀರ್ ಜಗತಪ್‌ನ ಹೆಸರಿನಲ್ಲಿರುವ 127 ಗಂಟೆಗಳ ಕಾಲದ ಭರತನಾಟ್ಯ ರೆಕಾರ್ಡ್ ಮುರಿದು ತನ್ನದೇ ಹೊಸ ದಾಖಲೆ ಮಾಡಲು ಶ್ರಮ ಪಡುತ್ತಿದ್ದಾರೆ. ಮೂರು ಗಂಟೆಗೊಮ್ಮೆ 15 ನಿಮಿಷಗಳಷ್ಟು ಮಾತ್ರ ವಿಶ್ರಾಂತಿ ಪಡೆದು ಉಳಿದ ಸಮಯದಲ್ಲಿ ಬಿಡುವಿಲ್ಲದೆ ಹಗಲು ಇರುಳು ಎನ್ನದೇ ತನ್ನ ಸಾಧನೆಯತ್ತ ಹೆಜ್ಜೆ ಹಾಕುವ ನಿರ್ಧಾರಕ್ಕೆ ಬಂದು ಮುಟ್ಟಿದ್ದಾರೆ.

**ತಾಯಿಯ ಪ್ರೋತ್ಸಾಹ:** ಗಂಟೆಗಟ್ಟಲೆ ನಿದ್ದೆ ಇಲ್ಲದೆ ಸಾಧನೆಯತ್ತ ಹೆಜ್ಜೆ ಹಾಕುತ್ತಿರುವ ರೆಮೋನಾ ಒಂದೆಡೆಯಾದರೇ ಆಕೆಯ ತಾಯಿ ಗ್ಲಾಡಿಸ್ ಪಿರೇರಾ ಮಗಳಿಗೆ ಸಾಥ್ ನೀಡುವ ಕೆಲಸದಲ್ಲಿ ಯಾವುದೇ ಬಿಡುವಿಲ್ಲದೆ ನಿರತರಾಗಿದ್ದಾರೆ.



ಭರತನಾಟ್ಯ ಕಲಾವಿದೆ ರೆಮೋನಾ

ತಾಯಿಯಂತೆ ಆಕೆಯ ಅಣ್ಣ ರೊನಾಲ್ಡ್ ರಾಕ್ಸನ್ ಸಹ ಆಕೆಯ ಸಾಧನೆಗೆ ಅಕ್ಕರೆಯಿಂದ ಸಹಾಯ ಮಾಡುತ್ತಿದ್ದಾರೆ. ಡಾ.ಶ್ರೀವಿದ್ಯಾ ಮುರಳೀಧರ್ ಮಾರ್ಗದರ್ಶನ ದಲ್ಲಿ ಕಳೆದ 17 ವರ್ಷಗಳಿಂದ ಅನೇಕ ಸಾಧನೆಯನ್ನು ಮಾಡುತ್ತ ಅನೇಕ ಟಿವಿ ಶೋಗಳಲ್ಲಿ ಮಿಂಚುತ್ತಿದ್ದಾಳೆ.

**ರೆಮೋನಾಳದ್ದು ಬಹುಮುಖ ಪ್ರತಿಭೆ:** ರೆಮೋನಾ ಭರತನಾಟ್ಯ ಮಾತ್ರವಲ್ಲದೇ ಕ್ಲಾಸಿಕಲ್, ಸೆಮಿಕ್ಲಾಸಿಕಲ್, ಫೋಕ್, ಹಿಪ್-ಹಾಪ್, ಲ್ಯಾಟಿನ್, ಆಕ್ರೋಬ್ಯಾಟಿಕ್, ಬಾಲಿವುಡ್, ಬಾಲ್ ರೂಮ್ ಮುಂತಾದ ಪ್ರಕಾರದ ನೃತ್ಯ ಮಾಡುತ್ತಾರೆ. ಮುರಿದ ಗ್ಲಾಸ್ ಮತ್ತು ಸೂಜಿಯ ಮೇಲೆ ನೃತ್ಯ, ತಟ್ಟೆ ಮೇಲೆ ನಿಂತು, ಮಡಕೆ ಮೇಲೆ ನಿಂತು ನೃತ್ಯ ಮಾಡುತ್ತಾರೆ. ಈಕೆಯ ಸಾಧನೆಗಳು ರಾಜ್ಯ, ರಾಷ್ಟ್ರಮಟ್ಟದಲ್ಲೂ ಗುರುತಿಸುವಂತಾಗಿದೆ.

> **ರೆಮೋನಾ ಸಾಧನೆ ಅಭಿನಂದನಾರ್ಹವಾದದ್ದು, ಹೊಸದಾದ ಸಾಧನೆ ಮಾಡಬೇಕೆನ್ನುವ ಹಂಬಲ ಆಕೆಯಲ್ಲಿದೆ. 170 ಗಂಟೆ ನಿರಂತರ ನೃತ್ಯ ಮಾಡುವುದೆಂದರೆ ಸುಲಭದ ಮಾತಲ್ಲ, ಅಂತಹ ಕಷ್ಟದ ಕೆಲಸಕ್ಕೆ ಮುಂದಾಗಿರುವುದು ನಿಜಕ್ಕೂ ಸಂಸ್ಥೆಗೆ ಹೆಮ್ಮೆಯ ಸಂಗತಿ. ಭರತನಾಟ್ಯ ಮಾಡುವಾಗ ಆಯಾಸವಾದರೂ ಅದನ್ನು ತೋರಿಸದೆ, ನಗು ನಗುತ್ತ ನೃತ್ಯ ಮಾಡುವುದು ನಿಜಕ್ಕೂ ಗ್ರೇಟ್**
>
> **-ಕ್ರಿಸ್ಟೋಫರ್** ನಿರ್ದೇಶಕ,
> ರಂಗ ಅಧ್ಯಯನ ಕೇಂದ್ರ
> ಸಂತ ಅಲೋಶಿಯಸ್ ಕಾಲೇಜು.

Prajavani 25-7-2025

# ರೆಮೋನಾ ಪಿರೇರಾ 170 ಗಂಟೆ ನಿರಂತರ ಭರತನಾಟ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ರೆಮೋನಾ ಇವೆಟ್ಟ ಪಿರೇರಾ ಸತತ 170 ಗಂಟೆ ಭರತ ನಾಟ್ಯ ಪ್ರದರ್ಶನ ನೀಡುವ ಮೂಲಕ ವಿಶ್ವ ದಾಖಲೆ ನಿರ್ಮಿಸಲು ಮುಂದಾಗಿದ್ದಾರೆ.

ಸೇಂಟ್ ಅಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ಈಗಾಗಲೇ ಭರತ ನಾಟ್ಯ ಆರಂಭಿಸಿರುವ ಅವರು ಹಗಲು ರಾತ್ರಿ ನೃತ್ಯ ಪ್ರದರ್ಶನ ನೀಡುತ್ತಿದ್ದಾರೆ. ಮೂರು ಗಂಟೆಗಳಿಗೊಮ್ಮೆ 15 ನಿಮಿಷ ವಿಶ್ರಾಂತಿ ಪಡೆದು ನೃತ್ಯ ಮುಂದುವರಿಸುತ್ತಿದ್ದಾರೆ. ಇದೇ 28ರಂದು ನೃತ್ಯ ಪ್ರದರ್ಶನವನ್ನು ಪೂರ್ಣಗೊಳಿಸುವ ಇರಾದೆಯನ್ನು ಹೊಂದಿದ್ದಾರೆ. ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆಯುವುದು ರೆಮೋನಾ ಉದ್ದೇಶ.

ಮೂರು ವರ್ಷದ ಬಾಲಕಿಯಾಗಿದ್ದಾಗಲೇ ಭರತ ನಾಟ್ಯ ಕಲಿಕೆ ಆರಂಭಿಸಿದ್ದ ರೆಮೋನಾ ಶ್ರೀವಿದ್ಯಾ ಮುರಳೀಧರ್ ಅವರ ಬಳಿ ನಾಟ್ಯಾಭ್ಯಾಸ ಮಾಡಿದ್ದಾರೆ.



ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ನೃತ್ಯ ಪ್ರದರ್ಶನದಲ್ಲಿ ತೊಡಗಿರುವ ರೆಮೋನಾ ಇವೆಟ್ಟ ಪಿರೇರಾ

2019ರಲ್ಲಿ ರಂಗಪ್ರವೇಶ ಮಾಡಿರುವ ಅವರು ಕೇಂದ್ರ ಸರ್ಕಾರ ನೀಡುವ ಪ್ರಧಾನಮಂತ್ರಿ ಬಾಲಪುರಸ್ಕಾರ ಹಾಗೂ ರಾಜ್ಯ ಸರ್ಕಾರ ನೀಡುವ ಬಾಲಗೌರವ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

Times of India 25-7-2025

# This BA student attempts 170-hour dance marathon

TIMES NEWS NETWORK



**EYEING A RECORD:** Remona Evette Pereira, a third-year BA student at St Aloysius, performs Bharatanatyam in a record-breaking bid

**Mangaluru:** Remona Evette Pereira, a third-year BA student at St Aloysius (Deemed to Be University), is on a tireless mission to etch her name in the Golden Book of Records with an extraordinary 170-hour Bharatanatyam dance marathon.

The dance marathon, under way at the St Aloysius College campus, began on July 21 and is set to conclude at 1pm on July 28. "As part of this marathon, she takes a short break of 15 minutes every three hours," said Christopher D'Souza, director, Ranga Adhyayana Kendra, St Aloysius College.

## BHARATANATYAM

"So far, over 125 hours have been recorded, and the entire performance is being meticulously documented. A judge is expected to arrive soon to officially validate the attempt. Remona's mother, Gladis Pereira, has been her strongest pillar of support throughout the challenge. Her energy rises whenever there is an audience. We also have a dedicated team of volunteers and students who take turns to stay with her, cheer her on, and keep her spirits high," D'Souza said.

Remona's passion for Bharatanatyam began early. She started learning at the age of three under the tutelage of Shrividya Muralidhar and performed her Rangapravesha in 2019. She is also a NSS volunteer. Her vision is to make Indian classical dance accessible to orphans, persons with disabilities, and transgender individuals. She also dreams of pursuing a PhD in Bharatanatyam.

Remona had received the Pradhan Mantri Rashtriya Bal Puraskar in 2022 and holds few other records to her name. She has won numerous dance competitions and has been featured on several TV shows.

Beyond Bharatanatyam, her dance repertoire spans classical, semi-classical, folk, hip hop, Latin, Bollywood, ballroom, and even acrobatic forms. Her performances are known for their daring and creativity, dancing on broken glass, nail pads, mud pots, balancing fire pots, karagattam, dancing with fire hula hoops, LED feathers, and even preparing tea on head and balancing on a copper plate.

Deccan Herald 26-7-2025

# 170-hr Bharatanatyam dance for Golden Book of Records

**MANGALURU, DHNS:** Remona Evette Pereira, a third-year BA student at St Aloysius University, has begun a 170-hour Bharatanatyam dance marathon to enter the Golden Book of Records.

The dance performance is underway on the campus from July 21 and will conclude at 1 pm on July 28. She takes a short break of 15 minutes every three hours. The entire performance is being meticulously documented. Remona's mother, Gladis Pereira, has been her support throughout the challenge. A dedicated team of volunteers and students takes turns staying with her.



**Remona Evette Pereira, a third-year BA student at St Aloysius (Deemed to be University), has begun a 170-hour Bharatanatyam dance marathon to enter the Golden Book of Records.**

Vijayavani 25-7-2025

ಸಂತ ಅಲೋಶಿಯಸ್ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ನಿರಂತರ 170 ಗಂಟೆ ನೃತ್ಯ

# ವಿಶ್ವದಾಖಲೆ ಗರಿಯತ್ತ ರೆಮೋನಾ ಪಿರೇರಾ ಭರತನಾಟ್ಯ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಹಲವಾರು ಶೈಲಿಯ ನೃತ್ಯಗಳನ್ನು ಪ್ರದರ್ಶಿಸಿ ಈಗಾಗಲೇ ವಿಶ್ವದ ಗಮನ ಸೆಳೆದಿರುವ ಮಂಗಳೂರಿನ ವಿದ್ಯಾರ್ಥಿನಿ ರೆಮೋನಾ ಪಿರೇರಾ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಮಾಡಲು ದಿನದ 24 ಗಂಟೆಗಳ ಕಾಲ ನಿರಂತರ 170 ಗಂಟೆ ಭರತನಾಟ್ಯ ಪ್ರದರ್ಶನ ಮುಂದುವರಿಸಿದ್ದಾರೆ.

ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಅಂತಿಮ ಬಿ.ಎ. ವಿದ್ಯಾರ್ಥಿನಿ ರೆಮೋನಾ ಪಿರೇರಾ ಈ

## ಬಳಿ ಇದೆ ಹಲವು ರೆಕಾರ್ಡ್ಸ್

ರೆಮೋನಾ ಪಿರೇರಾ ಭರತನಾಟ್ಯದಲ್ಲಿ 2017ರಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್, 2017ರಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್-ಲಂಡನ್, 2017ರಲ್ಲಿ ಭಾರತ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ತನ್ನ ಹೆಸರು ನಮೂದಿಸಿಕೊಂಡಿದ್ದಾರೆ. ಈಗಾಗಲೇ ಅನೇಕ ವೇದಿಕೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ರೆಮೋನಾ ಪ್ರಧಾನ ಮಂತ್ರಿ ಅತ್ಯುನ್ನತ ಬಾಲ ಪುರಸ್ಕಾರವನ್ನು ಪಡೆದುಕೊಂಡಿದ್ದಾರೆ. ರೆಮೋನಾ ಪಿರೇರಾ ಅವರು ಗ್ಲಾಡಿಸ್ ಪಿರೇರ ಅವರ ಪುತ್ರಿ.



ಸಾಧನೆಗೈಯುತ್ತಿದ್ದಾರೆ. ಜು.21ರಂದು ಬೆಳಗ್ಗೆ 10.30ರಿಂದ ಸಂತ ಅಲೋಶಿಯಸ್ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಭರತನಾಟ್ಯ ಪ್ರದರ್ಶನ ಆರಂಭಿಸಿದ್ದು, ಜು.28ರವರೆಗೆ ನಿರಂತರವಾಗಿ ನಾಟ್ಯ ನಡೆಯಲಿದೆ. ಈ ಮೂಲಕ ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ತನ್ನ ಹೆಸರು ನಮೂದು ಮಾಡಲಿದ್ದಾರೆ.

ಭರತನಾಟ್ಯದ ವಿವಿಧ ಮಾರ್ಗಗಳಾದ ಅಲರಿಪ್ಪು, ಜತಿಸ್ವರಂ, ಶಬ್ದಂ, ವರ್ಣಂ, ಪದಂ, ತಿಲ್ಲಾನ ಸೇರಿದಂತೆ ವಿವಿಧ ಮಾರ್ಗಗಳನ್ನು, ಸೆಮಿಕ್ಲಾಸಿಕ್, ದೇವರನಾಮ ಹಾಡುಗಳಿಗೂ ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. ಅದಕ್ಕೆ ತಕ್ಕಂತೆ ಹಾಡುಗಳ ರೆಕಾರ್ಡ್‌ಗಳನ್ನು ಬಳಸುತ್ತಿದ್ದಾರೆ. 61 ಪದ್ಯವನ್ನು 3 ಗಂಟೆಗಳಿಗೊಂದರಂತೆ ಜೋಡಿಸಲಾಗುತ್ತದೆ. ಈ ಸಾಧನೆಗಾಗಿ ರೆಮೋನಾ ಹಲವು ತಿಂಗಳುಗಳಿಂದ ಸಿದ್ಧತೆ ಮಾಡಿಕೊಂಡಿದ್ದಾರೆ.

**ಮೂರು ಗಂಟೆಗೆ 15 ನಿಮಿಷ ವಿರಾಮ:** ದಿನವಿಡೀ ಭರತನಾಟ್ಯ ಪ್ರದರ್ಶನ ನಡೆಯಲಿದ್ದು, ಪ್ರತಿ 3 ಗಂಟೆಗೊಮ್ಮೆ 15 ನಿಮಿಷಗಳ ಕಾಲ ಮಾತ್ರ ವಿರಾಮ ಇರುತ್ತದೆ. ಈ ಅವಧಿಯಲ್ಲಿ ಕೇವಲ ಮಿತ ಆಹಾರವಷ್ಟೇ ಸೇವನೆ ಮಾಡುತ್ತಾರೆ. ಮುಖ್ಯವಾಗಿ ಬಾಳೆಹಣ್ಣು, ಮೊಸರು, ಎಳನೀರು, ಅತಿ ಹೆಚ್ಚಾಗಿ ಬೇಯಿಸಿದ ಬೆಳ್ತಿಗೆ ಅನ್ನ ಸೇವಿಸುತ್ತಿದ್ದಾರೆ. ಇದಕ್ಕೆಂದು ಆಹಾರ ಕ್ರಮವನ್ನು ಹಲವು ತಿಂಗಳಿನಿಂದ ಅಭ್ಯಾಸ ಮಾಡುತ್ತಿದ್ದಾರೆ.

**ನಿರಂತರ ಅಭ್ಯಾಸ:** ರೆಮೋನಾ ಪಿರೇರಾ ಕಳೆದ 13 ವರ್ಷಗಳಿಂದ ಯೆಯ್ಯಾಡಿ [illegible] ಕಲಾಪರಿಷತ್ತಿನ ಡಾ.ಶ್ರೀವಿದ್ಯಾ ಅವರಲ್ಲಿ ಭರತನಾಟ್ಯ ಕಲಿಯುತ್ತಿದ್ದಾರೆ.

ರೆಮೋನಾ ಈ ಸಾಧನೆಗೈಯಲು ಪ್ರತಿದಿನ ಸುಮಾರು 5ರಿಂದ 6 ಗಂಟೆಗಳ ಕಾಲ ಭರತನಾಟ್ಯ ಅಭ್ಯಸಿಸುತ್ತಿದ್ದರು. ವಿದ್ಯೆಯ ಜತೆ ಭರತನಾಟ್ಯಕ್ಕೂ ಸಮಾನ ಪ್ರಾಶಸ್ತ್ಯ ನೀಡುತ್ತಿದ್ದಾರೆ. ಸಾವಿರಕ್ಕೂ ಅಧಿಕ ವೇದಿಕೆಗಳನ್ನು ಪ್ರದರ್ಶನ ಮಾಡಿದ್ದಾರೆ. ಸದ್ಯ ಭರತನಾಟ್ಯದಲ್ಲಿ ವಿದ್ವತ್ ತಯಾರಿಯಲ್ಲಿದ್ದಾರೆ.

## 127 ಗಂಟೆಯೇ ದಾಖಲೆ

ಸದ್ಯ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವ ದಾಖಲೆ ಇದೆ. 16 ವರ್ಷದ ಲಾತೂರ್‌ನ ಸುಧೀರ್ ಜಗತಾಪ್ ಅವರು 2023ರಲ್ಲಿ ಈ ಸಾಧನೆಗೈದಿದ್ದಾರೆ. ಈ ಮೂಲಕ ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲೆಗೈದಿದ್ದಾರೆ.

Udayavani 26-7-2025

▶ ದಾಖಲೆಯ ಹೊಸ್ತಿಲಿನಲ್ಲಿ ಭರತನಾಟ್ಯ ಕಲಾವಿದೆ ರೆಮೋನಾ ಪಿರೇರಾ

# 100 ಗಂಟೆ ಪ್ರದರ್ಶನ ಪೂರ್ಣ; ಗಣ್ಯರ ಶುಭಹಾರೈಕೆ





ಗಣ್ಯರಿಂದ ಪ್ರದರ್ಶನ ವೀಕ್ಷಣೆ, ಶುಭ ಹಾರೈಕೆ.

**ಮಹಾನಗರ, ಜು. 25:** ಐದು ದಿನಗಳಿಂದ ನಿರಂತರ ಭರತನಾಟ್ಯ ಪ್ರದರ್ಶನ ನೀಡುತ್ತಿರುವ ಮಂಗಳೂರಿನ ವಿದ್ಯಾರ್ಥಿನಿ ರೆಮೋನಾ ಪಿರೇರಾ ಅವರು ವಿಶ್ವದಾಖಲೆಯ ಹೊಸ್ತಿಲಲ್ಲಿದ್ದಾರೆ.

ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಜು. 21ರಂದು ಬೆಳಗ್ಗೆ 10.30ರಿಂದ ಆರಂಭಗೊಂಡ ಭರತನಾಟ್ಯ ಪ್ರದರ್ಶನ ಯಾವುದೇ ಅಡೆತಡೆ ಇಲ್ಲದೆ ಸಾಗಿದ್ದು, ಅವರು 100 ಗಂಟೆಗಳ ಪ್ರದರ್ಶನ ಪೂರ್ಣಗೊಳಿಸಿದ್ದಾರೆ. ಜು. 26ರಂದೇ 128 ಗಂಟೆಗಳ ಮೂಲಕ ವಿಶ್ವದಾಖಲೆ ಮೈಲಿಗಲ್ಲು ಸಾಧಿಸಲಿದ್ದಾರೆ. ಜು. 28ರವರೆಗೆ ನಿರಂತರ ಪ್ರದರ್ಶನ ನೀಡಿ 170 ಗಂಟೆಗಳನ್ನು ಪೂರ್ಣಗೊಳಿಸುವ ಇರಾದೆಯಲ್ಲಿ ರೆಮೋನಾ ಪಿರೇರಾ ಅವರಿದ್ದಾರೆ. ರೆಮೋನಾ ಅವರ ಆರೋಗ್ಯ ಬಗ್ಗೆ ವೈದ್ಯಕೀಯ ತಂಡ ಅಲ್ಲೇ ನಿಗಾ ಇರಿಸಿದ್ದು, ಈ ವರೆಗೆ ಯಾವುದೇ ಸಮಸ್ಯೆ ಬಂದಿಲ್ಲ. ಅವರ ತಾಯಿ ಕೂಡ ಸದಾ ಜತೆಗಿದ್ದಾರೆ ಎನ್ನುತ್ತಾರೆ ಕಾಲೇಜಿನ ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಕ್ರಿಸ್ಟೋಫರ್ ಡಿ'ಸೋಜಾ.

## ಜನಪ್ರತಿನಿಧಿಗಳಿಂದ ಶುಭಹಾರೈಕೆ

ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಹೆಸರು ಸಾಧನೆಗೈಯಲು ಹೆಜ್ಜೆ ಹಾಕುತ್ತಿರುವ ರೆಮೋನಾ ಪಿರೇರಾ ಅವರನ್ನು ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಶಾಸಕ ಡಿ. ವೇದವ್ಯಾಸ ಕಾಮತ್, ವಿಧಾನ ಪರಿಷತ್ ಸದಸ್ಯ ಐವನ್ ಡಿ'ಸೋಜಾ, ಸಂತ ಅಲೋಶಿಯಸ್ ವಿ.ವಿ. ಕುಲಪತಿ ಪ್ರವೀಣ್ ಮಾರ್ಟಿಸ್ ಅವರು ಶುಕ್ರವಾರ ಭೇಟಿ ನೀಡಿ ಕೆಲ ಕಾಲ ಭರತನಾಟ್ಯ ವೀಕ್ಷಿಸಿದರು. ರೆಮೋನಾ ಅವರಿಗೆ ಶುಭಹಾರೈಸಿದರು.

Hosadigantha 26-7-2025

# 170 ಗಂಟೆ ಸತತ ಭರತನಾಟ್ಯ: ರೆಮೋನಾ ಗುರಿ

**• ಮಂಗಳೂರು:** ನಿರಂತರ ಭರತ ನಾಟ್ಯ ಪ್ರದರ್ಶನದ ಮೂಲಕ ದಾಖಲೆಗೆ ಮುಂದಾಗಿದ್ದಾರೆ ರೆಮೋನಾ ಪಿರೇರಾ. ಏಳು ದಿನಗಳ ಕಾಲ ನಿರಂತರ ನೃತ್ಯದೊಂದಿಗೆ 170 ಗಂಟೆ ಸತತ ಭರತನಾಟ್ಯ ಪ್ರದರ್ಶನದ ಮೂಲಕ ದಾಖಲೆ ನಿರ್ಮಿಸುವುದು ರೆಮೋನಾ ಗುರಿ.

ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಅಂತಿಮ ಬಿ.ಎ. ವಿದ್ಯಾರ್ಥಿನಿ ರೆಮೋನಾ ಪಿರೇರಾ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆಗೈಯಲು ಈ ನೃತ್ಯ ಮಾಡುತ್ತಿದ್ದಾರೆ. ಜು. 21ರಂದು ಬೆಳಗ್ಗೆ 10.30ರಿಂದ ಸಂತ ಅಲೋಶಿಯಸ್ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಭರತನಾಟ್ಯ ಪ್ರದರ್ಶನ ಆರಂಭಿಸಿದ್ದಾರೆ. ಜು. 28ರ ವರೆಗೆ ನಿರಂತರವಾಗಿ ನಾಟ್ಯ ನಡೆಯಲಿದೆ.

ಭರತನಾಟ್ಯದ ವಿವಿಧ ನಡೆಗಳಾದ ಅಲರಿಪು, ಜತಿಸ್ವರಂ, ಶಬ್ದಂ, ವರ್ಣಂ, ಪದಂ, ತಿಲ್ಲಾನಗಳ ಜತೆಗೆ ಸೆಮಿಕ್ಲಾಸಿಕ್, ದೇವರ ನಾಮಗಳಿಗೆ ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. ಅದಕ್ಕೆ ತಕ್ಕಂತೆ ಹಾಡುಗಳ ರೆಕಾರ್ಡ್‌ಗಳನ್ನು ಬಳಸುತ್ತಿದ್ದಾರೆ. 61 ಪದ್ಯವನ್ನು 3 ಗಂಟೆಗಳಿಗೊಂದರಂತೆ ಜೋಡಿಸಲಾಗುತ್ತದೆ.

ರಾತ್ರಿ-ಹಗಲೆನ್ನದೆ ದಿನವಿಡೀ ಭರತನಾಟ್ಯ



ಪ್ರದರ್ಶನ ನಡೆಯಲಿದ್ದು, ಪ್ರತೀ ಮೂರು ಗಂಟೆಗೊಮ್ಮೆ 15 ನಿಮಿಷಗಳ ಕಾಲ ಮಾತ್ರ ವಿರಾಮ ಇರುತ್ತದೆ. ಈ ಅವಧಿಯಲ್ಲಿ ಕೇವಲ ಮಿತ ಆಹಾರವಷ್ಟೇ ಸೇವನೆ ಮಾಡುತ್ತಾರೆ. ಮುಖ್ಯವಾಗಿ ಬಾಳೆಹಣ್ಣು, ಮೊಸರು, ಎಳನೀರು, ಅತೀ ಹೆಚ್ಚಾಗಿ ಬೇಯಿಸಿದ ಬೆಳ್ತಿಗೆ ಅನ್ನ ಸೇವಿಸುತ್ತಿದ್ದಾರೆ. ಇದಕ್ಕೆಂದು ಆಹಾರ ಕ್ರಮವನ್ನು ಹಲವು ತಿಂಗಳುಗಳಿಂದ ಅಭ್ಯಾಸ ಮಾಡುತ್ತಿದ್ದಾರೆ.

ರೆಮೋನಾ ಪಿರೇರಾ ಅವರು 13 ವರ್ಷಗಳಿಂದ ಯೆಯ್ಯಾಡಿ ಸೌರಭ ಕಲಾಪರಿಷತ್‌ನ ಡಾ. ಶ್ರೀವಿದ್ಯಾ ಅವರಲ್ಲಿ ಭರತನಾಟ್ಯ ಕಲಿಯುತ್ತಿದ್ದಾರೆ.

ರೆಮೋನಾ ಅವರು ಈ ಸಾಧನೆಗೈಯಲು ಪ್ರತೀ ದಿನ ಸುಮಾರು 5ರಿಂದ 6 ಗಂಟೆಗಳ ಕಾಲ ಭರತನಾಟ್ಯ ಅಭ್ಯಸಿಸಿದ್ದಾರೆ. ನಗರದ ಗ್ಲಾಡಿಸ್ ಪಿರೇರ ಅವರ ಪುತ್ರಿಯಾಗಿರುವ ರೆಮೋನಾ ಭರತನಾಟ್ಯದಲ್ಲಿ 2017ರಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್, 2017ರಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್- ಲಂಡನ್, 2017ರಲ್ಲಿ ಭಾರತ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ತನ್ನ ಹೆಸರು ನಮೂದಿಸಿ ಕೊಂಡಿದ್ದಾರೆ. ಪ್ರಧಾನ ಮಂತ್ರಿ ಅತ್ಯುನ್ನತ ಬಾಲ ಪುರಸ್ಕಾರವನ್ನು ಪಡೆದುಕೊಂಡಿದ್ದಾರೆ.

ಸದ್ಯ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವುದು ದಾಖಲೆ ಇದೆ. 16 ವರ್ಷದ ಲಾತೂರ್‌ನ ಸುಧೀರ್ ಜಗಪತ್ ಅವರು 2023ರಲ್ಲಿ ಈ ಸಾಧನೆಗೈದಿದ್ದಾರೆ. ಈ ಮೂಲಕ ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆಗೈದಿದ್ದಾರೆ.

Udayavani 27-7-2025

# ವಿಶ್ವ ದಾಖಲೆ ಬಳಿಕವೂ ಮುಂದುವರಿದ ರೆಮೋನಾ ನೃತ್ಯ: ನಾಳೆ ಅಧಿಕೃತ ಘೋಷಣೆ

**ಮಹಾನಗರ, ಜು. 25:** ಮಂಗಳೂರಿನ ಸಂತ ಅಲೋಶಿಯಸ್ ವಿ.ವಿ. ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಕಳೆದ ಆರು ದಿನಗಳಿಂದ ನಿರಂತರ ಭರತನಾಟ್ಯ ಪ್ರದರ್ಶನ ನೀಡುತ್ತಿರುವ ವಿದ್ಯಾರ್ಥಿನಿ ರೆಮೋನಾ ಪಿರೇರಾ ಅವರು ಶನಿವಾರ ಸಂಜೆ ವೇಳೆಗೆ ವಿಶ್ವದಾಖಲೆ ಬರೆದಿದ್ದಾರೆ. ಬಳಿಕವೂ ಭರತ ನಾಟ್ಯ ಮುಂದುವರಿದಿದೆ.

ಲಾತೂರ್‌ನ 16 ವರ್ಷದ ಸುಧೀರ್ ಜಗಪತ್ ಅವರು 2023ರಲ್ಲಿ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವುದು ಈವರೆಗಿನ ದಾಖಲೆ. ಇದೀಗ ರೆಮೋನಾ ಪಿರೇರಾ ಅವರು ಈ ದಾಖಲೆ ಮುರಿದಿದ್ದಾರೆ. ಇದರೊಂದಿಗೆ ಅಧಿಕೃತವಾಗಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ತನ್ನ ಹೆಸರು ದಾಖಲಿಸಲು ತುದಿಗಾಲಿನಲ್ಲಿ ನಿಂತಿದ್ದಾರೆ. ಜತೆಗೆ 170 ಗಂಟೆಗಳ ನೃತ್ಯಸಾಧನೆಗಾಗಿ ಅವರ ಪ್ರದರ್ಶನ ಮುಂದುವರಿದಿದೆ.

ಜು. 21ರಂದು ಬೆಳಗ್ಗೆ 10.30ರಿಂದ ಆರಂಭಗೊಂಡ ಭರತನಾಟ್ಯ ಪ್ರದರ್ಶನ ಹಗಲು-ರಾತ್ರಿ ನಿರಂತರವಾಗಿ ನಡೆಯು



ತ್ತಿದ್ದು, ಜು. 27ರ ಸಂಜೆ ಮುಕ್ತಾಯಗೊಳ್ಳಲಿದೆ. ಪ್ರತೀ ಮೂರು ಗಂಟೆಗೊಮ್ಮೆ 15 ನಿಮಿಷಗಳ ಕಾಲ ಮಾತ್ರ ವಿರಾಮವಿದೆ. ವೈದ್ಯರು ಸ್ಥಳದಲ್ಲಿದ್ದು, ಆರೋಗ್ಯ ವಿಚಾರಿಸುತ್ತಿದ್ದಾರೆ.

**ನಾಳೆ ಅಧಿಕೃತ ಘೋಷಣೆ**

ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಜು. 28ರಂದು ನಡೆಯುವ ಕಾರ್ಯಕ್ರಮದಲ್ಲಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ತಂಡದಿಂದ ಅಧಿಕೃತವಾಗಿ ಘೋಷಣೆ ಪಡೆದುಕೊಂಡು, ಪ್ರಶಸ್ತಿ ಸ್ವೀಕರಿಸಲಿದ್ದಾರೆ.

Udayavani 28-7-2025

**ಅಧಿಕೃತ ಘೋಷಣೆಯೊಂದೇ ಬಾಕಿ**

# ನಿರಂತರ 7 ದಿನ ಭರತನಾಟ್ಯ; ರೆಮೋನಾ ವಿಶ್ವದಾಖಲೆ!



ಮಂಗಳೂರು, ಜು. 27: ಕಳೆದ ಏಳು ದಿನಗಳಿಂದ ನಿರಂತರ ಭರತನಾಟ್ಯ ಪ್ರದರ್ಶನ್ನೈದು ದಾಖಲೆ ಮಾಡುವ ಮೂಲಕ ಮಂಗಳೂರಿನ ರೆಮೋಣಾ ಪಿರೇರಾ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ನಲ್ಲಿ ತನ್ನ ಹೆಸರು ನಮೂದಿಸುವ ಹೊಸ್ತಿಲಿನಲ್ಲಿದ್ದಾರೆ.

ಮಂಗಳೂರಿನ ಸಂತ ಅಲೋಶಿಯಸ್ ವಿ.ವಿ.ಯ ವಿದ್ಯಾರ್ಥಿನಿ ರೆಮೋಣಾ ಅವರು ಇದೇ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಜು. 21ರಂದು ಬೆಳಗ್ಗೆಯಿಂದ ಆರಂಭಿಸಿದ ಭರತನಾಟ್ಯ ಪ್ರದರ್ಶನ ಹಗಲು-ರಾತ್ರಿ ನಿರಂತರವಾಗಿ ನಡೆಯುತ್ತಿದೆ. ಪ್ರತೀ 3 ಗಂಟೆಗೆ 15 ನಿಮಿಷ ಮಾತ್ರ ಬಿಡುವು ಇರುತ್ತದೆ.

ಲಾತೂರ್‌ನ 16 ವರ್ಷದ ಸುಧೀರ್ ಜಗಪತ್ ಅವರು 2023ರಲ್ಲಿ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವುದು ಈವರೆಗಿನ ದಾಖಲೆ. ರೆಮೋನಾ ಪಿರೇರಾ ಅವರು ಈ ದಾಖಲೆಯನ್ನು ಜು. 26ರ ಸಂಜೆಯೇ ಮುರಿದಿದ್ದು ರವಿವಾರವೂ ತನ್ನ ಭರತನಾಟ್ಯ ಪ್ರದರ್ಶನವನ್ನು ಮುಂದುವರೆಸಿದ್ದಾರೆ.

**ಇಂದು ಪ್ರಶಸ್ತಿ ಪ್ರದಾನ**

ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಜು. 28ರಂದು ನಡೆಯುವ ಕಾರ್ಯಕ್ರಮದಲ್ಲಿ ರೆಮೋನಾ ಪಿರೇರಾ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ತಂಡದಿಂದ ಅಧಿಕೃತವಾಗಿ ಘೋಷಣೆ ಪಡೆದುಕೊಂಡು, ಪ್ರಶಸ್ತಿ ಸ್ವೀಕರಿಸಲಿದ್ದಾರೆ.

Udayavani 28-7-2025

# ರೆಮೋನಾ ಸಾಧನೆ ಮಾದರಿಯಾಗಲಿ



**ಮಹಾನಗರ, ಜು. 27:** ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆಯುವ ಗುರಿಯೊಂದಿಗೆ ಏಳು ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡುತ್ತಿರುವ ಸಂತ ಅಲೋಶಿಯಸ್ ವಿ.ವಿ. ವಿದ್ಯಾರ್ಥಿನಿ ರೆಮೋಣಾ ಪಿರೇರಾ ಅವರ ಪ್ರದರ್ಶನವನ್ನು ಸಂಸದ ಕ್ಯಾ| ಬ್ರಿಜೇಶ್ ಚೌಟ ಅವರು ವೀಕ್ಷಿಸಿದರು.

ತಮ್ಮ ಅಸಾಧಾರಣ ಸಾಧನೆಯ ಮೂಲಕ ವಿಶ್ವದಾಖಲೆಯತ್ತ ಹೆಜ್ಜೆ ಹಾಕುತ್ತಿರುವ ಅವರ ಪ್ರಯತ್ನಕ್ಕೆ ಶುಭವಾಗಲಿ. 2022ನೇ ಸಾಲಿನಲ್ಲಿ ಕೇಂದ್ರ ಸರಕಾರದಿಂದ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನೂ ಅವರು ಪಡೆದಿದ್ದು, ಜೀವನದಲ್ಲಿ ಇನ್ನಷ್ಟು ಸಾಧನೆಗೈಯಲಿ. ಅವರ ಸಾಧನೆ ಬೇರೆಯವರಿಗೆ ಮಾದರಿಯಾಗಲಿ ಎಂದು ಹಾರೈಸಿದರು.

The Hindu 29-7-2025

# Student enters Golden Book of World Records with marathon Bharatanatyam performance

**The Hindu Bureau**
MANGALURU



India Representative of the Golden Book of World Records, Manish Vishnoi, handing over the certificate toRemona Evette Pereira. SPECIAL ARRANGEMENT

Remona Evette Pereira, the BA student from St. Aloysius (Deemed to be University), Mangaluru, entered the Golden Book of World Records with her 170-hour-long Bharatanatyam performance.

Her dance performance began by offering prayers to Lord Ganesha on the morning of July 21, in an auditorium of the institute. The marathon dance performance concluded with a ballet, followed by a prayer to Goddess Durga, around noon on Monday.

The performance continued over the period, with a 15-minute break every three hours of presentation.

During this period, Ms. Pereira was graceful with her footwork, expression, gesture and postures. Applauding the marathon dance performance, her dance guru, Shrividya Muralidhar, said that Ms. Pereira has achieved a rare feat, bringing pride to Tulu Nadu and the country.

India Representative of the Golden Book of World Records, Manish Vishnoi, handed over the certificate to Ms. Pereira.

Vice-chancellor of St. Aloysius (Deemed to be University) Praveen Martis also applauded the performance of Ms. Pereira.

Varthabharathi 29-7-2025

# ಭರತನಾಟ್ಯದಲ್ಲಿ ಕುಡ್ಲದ ಕುವರಿಯ ವಿಶ್ವ ದಾಖಲೆ

## ಸಂತ ಅಲೋಶಿಯಸ್ ವಿವಿಯ ವಿದ್ಯಾರ್ಥಿನಿಯಿಂದ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ▸ 170 ಗಂಟೆಗಳ ಹೊಸ ದಾಖಲೆ



### ದಣಿವರಿಯದ ರೆಮೋನಾ!

[illegible]

Udayavani 29-7-2025

# 7 ರಾತ್ರಿ 7 ಹಗಲು ಕುಣಿದರೂ ದಣಿಯದ ರೆಮೋನಾ

## 170 ಗಂಟೆಗಳ ನಿರಂತರ ಭರತನಾಟ್ಯ ವಿಶ್ವ ದಾಖಲೆ ಅಮ್ಮನಿಗೆ ಅರ್ಪಣೆ ಎಂದ ಸಾಧಕಿ

**ಮಹಾನಗರ, ಜು. 28:** ಮೊದಲ ದಿನ ಸ್ವಲ್ಪ ಕಠಿನವಾಗಿತ್ತು. ಆ ಸಮಯದಲ್ಲಿ ಈ ಸಾಧನೆ ನನ್ನಿಂದ ಸಾಧ್ಯವಾಗುತ್ತಾ ಎನ್ನುವ ಸಣ್ಣ ಅನುಮಾನವೊಂದು ಕಾಡಿತ್ತು. ಆದರೆ ಈ ಹಂತದಲ್ಲಿ ಮತ್ತು ಎಲ್ಲ ಹಂತಗಳಲ್ಲಿ ನನಗೆ ಶಕ್ತಿ ತುಂಬಿದ್ದು ನನ್ನ ತಾಯಿ. ತಾಯಿಯೇ ನನಗೆ ಸರ್ವಸ್ವ. ಈ ಸಾಧನೆ ಅವರಿಗೆ ಸಮರ್ಪಣೆ: ಹೀಗೆಂದು ಭಾವುಕರಾಗಿ ಹೇಳಿದ್ದು ರೆಮೋನಾ ಇವೆಟ್ ಪಿರೇರಾ.

ಜು. 21ರ ಬೆಳಗ್ಗೆಯಿಂದ ಜು. 28ರ ಬೆಳಗ್ಗಿನ ವರೆಗೆ ಏಳು ರಾತ್ರಿ ಏಳು ಹಗಲು ನಿರಂತರವಾಗಿ 170 ಗಂಟೆಗಳ ಭರತನಾಟ್ಯ ಪ್ರದರ್ಶಿಸುವ ಮೂಲಕ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ವಿಶ್ವದಾಖಲೆಯನ್ನೂ ಮೀರಿಸಿ ನಿಂತ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಅಂತಿಮ ಬಿಎ ವಿದ್ಯಾರ್ಥಿನಿ ರೆಮೋನಾ ಮಹಾಸಾಧನೆಯ ಬಳಿಕ ಉದಯವಾಣಿ ಜತೆ ಮಾತನಾಡಿದರು.

ತಾಯಿ, ನೃತ್ಯ ಗುರು, ಕಾಲೇಜು ಆಡಳಿತ ವರ್ಗ, ಪ್ರಾಧ್ಯಾಪಕರು, ಮಂಗಳೂರಿಗರು ಹಾಗೂ ಜತೆಯಲ್ಲೇ ಇದ್ದ ಸ್ನೇಹಿತರ ಬೆಂಬಲದಿಂದ 170 ಗಂಟೆಗಳು 170 ನಿಮಿಷದಂತೆ ಕಳೆದು ವಿಶ್ವ ದಾಖಲೆಯಾಯಿತು ಎಂದರು ರೆಮೋನಾ. 'ರೆಮೋನಾ ಯು ಕ್ಯಾನ್ ಡು ಇಟ್..' ಎನ್ನುವ ಧ್ವನಿ ನನಗೆ ನವೋಲ್ಲಾಸ ನೀಡುತ್ತಿತ್ತು. ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ಮೊದಲ ದಿನ ಕಷ್ಟವಾಯಿತು. ಆ ಸಮಯದಲ್ಲಿ ಅನೇಕರು ಹೆಚ್ಚು ರಿಸ್ಕ್ ತೆಗೆದುಕೊಳ್ಳದೆ ಅರ್ಧದಲ್ಲೇ ನಿಲ್ಲಿಸುವಂತೆ ತಿಳಿಸಿದ್ದರು. ಆದರೆ, ಸಾಧಿಸಲೇ ಬೇಕೆಂಬ ಛಲ ಹಾಗೂ ಹಠ ನನ್ನಲ್ಲಿತ್ತು ಎಂದರು.



ಅಮ್ಮ ಗುರುಗಳ ಆಲಿಂಗನ

ತಾಯಿಯೇ ನನ್ನಪಾಲಿನ ದೇವತೆ. ಬದುಕಿನಲ್ಲಿ ಅವರಿಲ್ಲದೆ ನಾನೇನೂ ಅಲ್ಲ. 7 ದಿನಗಳು ನನಗಿಂತ ಅವರೇ ಹೆಚ್ಚು ಶ್ರಮ ವಹಿಸಿಕೊಂಡಿದ್ದಾರೆ. ಮೊದಲ ದಿನದಿಂದ ಇಂದಿನ ವರೆಗೂ ಅವರು ತಾನೇ ನೃತ್ಯ ಮಾಡುವಂತೆ ಇದ್ದರು. ಪ್ರತೀ ವಿರಾಮದ ವೇಳೆಯಲ್ಲೂ ನನಗೆ ಧೈರ್ಯ ತುಂಬುತ್ತಿದ್ದರು ಎಂದು ತಾಯಿಯ ಬಗ್ಗೆ ಅಭಿಮಾನದಿಂದ ಹೇಳಿಕೊಂಡರು ರೆಮೋನಾ.

### ಗುರಿ ಮುಟ್ಟಿಸಿದ ಗುರುವಿಗೆ ನಮನ

ಜೀವನದಲ್ಲಿ ಸಾಧನೆ ಬಾಲ್ಯದ ಕನಸು. ಅದನ್ನು ಸಾಕಾರಗೊಳಿಸಿದ್ದು ಗುರುಗಳ ಆಶೀರ್ವಾದ. ನನ್ನ ನೃತ್ಯ ಗುರು ಶ್ರೀವಿದ್ಯಾ ಮುರಳೀಧರ್ ಅವರು, ನನಗೆ ಈ ಸಾಧನೆಗೆ ದಾರಿ ತೋರಿದರು. ಅವರು ಕಲಿಸಿದ್ದನ್ನು ನಿಷ್ಠೆಯಿಂದ ಕಲಿತೆ. ನನ್ನ ಎಲ್ಲ ನೃತ್ಯಗಳಿಗೆ ಹಾಡುಗಳನ್ನು ಆಯ್ಕೆ ಮಾಡಿ ಕೊರಿಯೊಗ್ರಾಫಿ ಮಾಡಿದ್ದಾರೆ ಎಂದು ಹೇಳಿದರು.

### 24 ಗಂಟೆಯಿಂದ 170ರ ಹಾದಿಯಲ್ಲಿ

- ಮೊದಲು 24 ಗಂಟೆ ಭರತ್ಯ ನಾಟ್ಯದ ಯೋಚನೆ ಇತ್ತು. ಹೆಚ್ಚು ಸಮಯ ವಿಸ್ತರಣೆ ಕ್ರೇಜ್ ಮೂಡಿತು. ಹಿಂದಿನ 125 ಗಂಟೆಗಳ ದಾಖಲೆ ಹಿಮ್ಮೆಟ್ಟಿಸಬಾರದೇಕೆ ಎಂದು ನಾನೇ ಸವಾಲು ಹಾಕಿಕೊಂಡು ಪ್ರಯತ್ನ ಆರಂಭಿಸಿದೆ.
- ಪ್ರತಿ ನಿತ್ಯ ದೀರ್ಘಕಾಲ ಅಭ್ಯಾಸ ನಡೆಸಿದೆ. ನಿದ್ದೆ ಬಿಟ್ಟು ನೃತ್ಯ ಮಾಡುವುದನ್ನು ಅಭ್ಯಾಸ ಮಾಡಿದೆ.
- ಆಹಾರ ಮತ್ತು ವಿಶ್ರಾಂತಿಯ ವಿಚಾರದಲ್ಲಿ ಹಲವು ಪ್ರಯೋಗಗಳನ್ನು ಮಾಡಿ ದಣಿವನ್ನು ಕಡಿಮೆ ಮಾಡಿಕೊಂಡೆ.
- ವಿಶ್ವ ದಾಖಲೆಗೆ ಸಮೀಪಿಸುತ್ತಿದ್ದಂತೆ ನನಗಿಂತ ನನಗೆ ಬೆಂಬಲಕೊಟ್ಟ ನನ್ನ ಸ್ನೇಹಿತ ವರ್ಗದವರು ಭಾವುಕರಾದರು.
- ಜನ್ಮ ನೀಡಿದ ತಾಯಿ, ಭಾರತಾಂಬೆಯ ಋಣ ತೀರಿಸಿದ ಸಾರ್ಥಕತೆ ಮೂಡಿತು ಎನ್ನುತ್ತಾರೆ ರೆಮೋನಾ

Udayavani 29-7-2025

## 170 ಗಂಟೆ ನಿರಂತರ ಭರತನಾಟ್ಯ ಸಾಧನೆ

# ಗೋಲ್ಡನ್ ಬುಕ್ ದಾಖಲೆಗೆ ಸೇರಿದ ರೆಮೋನಾ






ಮಂಗಳೂರು, ಜು. 28: ಪ್ರಧಾನಮಂತ್ರಿ ಬಾಲ ಪುರಸ್ಕಾರ ಪುರಸ್ಕೃತೆ ರೆಮೋನಾ ಎವೆಟ್ ಪಿರೇರಾ 170 ಗಂಟೆಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡುವ ಮೂಲಕ ಗೋಲ್ಡನ್ ಬುಕ್ ಆಫ್ ವರ್ಲ್ಡ್‌ನಲ್ಲಿ ಹೆಸರು ದಾಖಲಿಸಿದ್ದಾರೆ.

ಸೋಮವಾರ ನಡೆದ ಸಮಾರಂಭದಲ್ಲಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಏಷ್ಯಾದ ಮುಖ್ಯಸ್ಥ ಡಾ| ಮನೀಶ್ ವಿಷ್ಣೋಯಿ ಪ್ರಮಾಣ ಪತ್ರ ಹಸ್ತಾಂತರಿಸಿದರು. ರೆಮೋನಾ ಅಲೋಶಿಯಸ್ ವಿವಿ ವಿದ್ಯಾರ್ಥಿನಿ.

ಈ ವೇಳೆ ಮಾತನಾಡಿದ ಡಾ| ವಿಷ್ಣೋಯಿ, ಭರತನಾಟ್ಯದಲ್ಲಿ ಹಾವ-ಭಾವಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತದೆ. ರೆಮೋನಾ 7 ದಿನಗಳ ನೃತ್ಯ ಮ್ಯಾರಥಾನ್ ಬಗ್ಗೆ ಸಂಸ್ಥೆಯಲ್ಲಿ ಕೋರಿದಾಗ ದಾಖಲೆಗೆ 5 ದಿನಗಳ ನಿರಂತರ ನೃತ್ಯ ಸಾಕು ಎಂದಿದ್ದೆವು. ಆದರೆ ಅವರು 10,200 ನಿಮಿಷಗಳ ನೃತ್ಯದೊಂದಿಗೆ ಚಿನ್ನದ ಹುಡುಗಿಯಾಗಿದ್ದಾರೆ ಎಂದರು.

ಸಂತ ಅಲೋಶಿಯಸ್ ವಿಶ್ವ ವಿದ್ಯಾನಿಲಯದ ಉಪಕುಲಪತಿ ರೆ|ಡಾ| ಪ್ರವೀಣ್ ಮಾರ್ಟಿಸ್ ಮಾತನಾಡಿ, ರೆಮೋನಾ ಅವರು ಪದವಿಗೆ ಸೇರುವ ಸಂದರ್ಭದಲ್ಲೇ ನೃತ್ಯದಲ್ಲಿ ದಾಖಲೆ ಮಾಡುವ ಬಗ್ಗೆ ಹೇಳಿಕೊಂಡಿದ್ದರು. ಅದಕ್ಕಾಗಿ ಒಂದೂವರೆ ವರ್ಷದಿಂದ ಸಂಸ್ಥೆ ಕೂಡಾ ಸಂಬಂಧಪಟ್ಟವರನ್ನು ಸಂಪರ್ಕಿಸಿ ಕಾಲೇಜಿನಲ್ಲಿ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಿತ್ತು. ಆಕೆ ತನ್ನ ಸಾಧನೆಯ ಗುರಿ ಮುಟ್ಟುವ ಮೂಲಕ ಎಲ್ಲರಿಗೂ ಕೀರ್ತಿ ತಂದಿದ್ದಾರೆ ಎಂದರು.

ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ವಂ|ಡಾ| ಮೆಲ್ವಿನ್ ಜೆ. ಪಿಂಟೊ, ವಿಧಾನ ಪರಿಷತ್ ಸದಸ್ಯ ಐವನ್ ಡಿ'ಸೋಜಾ, ರೆಮೋನಾ ಅವರ ತಾಯಿ ಗ್ಲ್ಯಾಡಿಸ್ ಮತ್ತಿತರರು ಇದ್ದರು.

ಮಗಳ ಸಾಧನೆ ಕುರಿತು ಮಾತನಾಡಿದ ಗ್ಲ್ಯಾಡಿಸ್ ಪಿರೇರಾ, 7 ದಿನಗಳಲ್ಲಿ ನಿದ್ರೆಯ ಸವಾಲು ಎದುರಾಗಿತ್ತು. ಆದರೆ, ಸ್ನೇಹಿತರು ಅವರನ್ನು ನಿದ್ರೆಯ ಗುಂಗಿನಿಂದ ಹೊರ ತಂದರು. ಸಂಸ್ಥೆಯ ನಿಯಮದಂತೆ ಪ್ರತೀ ರಾತ್ರಿ 1 ಗಂಟೆ ಹಾಗೂ ಪ್ರತೀ 3 ಗಂಟೆಯ ನಡುವೆ 15 ನಿಮಿಷ ವಿರಾಮವನ್ನು ಪಾಲಿಸಲಾಯಿತು ಎಂದರು.

### 'ಭರತನಾಟ್ಯ ಮ್ಯಾರಥಾನ್'

ಜು. 21ರಂದು ಬೆಳಗ್ಗೆ 10 ಕ್ಕೆ ಸಂತ ಅಲೋಶಿಯಸ್‌ನ ಎಲ್‌ಸಿಆರ್‌ಐ ರಾಬರ್ಟ್ ಸಿಕ್ವೇರಾ ಸಭಾಂಗಣದಲ್ಲಿ 'ಭರತನಾಟ್ಯ ಮ್ಯಾರಥಾನ್' ಆರಂಭಿಸಿದ್ದ ರೆಮೋನಾ ಜು. 28 ರ ಮಧ್ಯಾಹ್ನ 12.30 ಗಂಟೆಯವರೆಗೆ ನೃತ್ಯ ಪ್ರದರ್ಶನ ನೀಡಿದರು. ಆ ಮೂಲಕ ಭಾರತದ ಸೃಷ್ಟಿ ಸುಧೀರ್ ಜಗ್ತಾಪ್ ಹೆಸರಿನಲ್ಲಿದ್ದ 127 ಗಂಟೆಗಳ ನೃತ್ಯ ದಾಖಲೆಯನ್ನು ಹಿಮ್ಮೆಟ್ಟಿದರು.

" ಭರತನಾಟ್ಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಾಖಲೆ ರೆಮೋನಾ ಮಾಡಿದ್ದಾರೆ ಎಂದು ಹೇಳಿರುವ ನೃತ್ಯ ಗುರು ಡಾ. ಶ್ರೀವಿದ್ಯಾ ಮುರಳೀಧರ್, ನಿದ್ದೆ ಇಲ್ಲದೆ ಭರತನಾಟ್ಯ ಪ್ರದರ್ಶನ ಊಹಿಸಲು ಅಸಾಧ್ಯ. 170 ಗಂಟೆಗಳ ಪ್ರದರ್ಶನದಲ್ಲಿ ಅವರು ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿದ್ದಾರೆ ಎಂದು ಮೆಚ್ಚುಗೆ ತೋರಿದ್ದಾರೆ.

**- ಡಾ| ಶ್ರೀವಿದ್ಯಾ ಮುರಳೀಧರ್**, ನೃತ್ಯ ಗುರು

" ಸಾಧನೆಗೆ ಅನೇಕರು ನೆರವಾಗಿದ್ದು, ತಾಯಿ ಶಕ್ತಿ ತುಂಬಿದರೆ, ಗುರುಗಳು ದಾರಿ ತೋರಿದ್ದಾರೆ. ಸಂತ ಅಲೋಶಿಯಸ್ ಸಂಸ್ಥೆ ಸಂಪೂರ್ಣ ನೆರವಾಗಿದೆ. ಏಕಾಗ್ರತೆ, ಕಠಿಣ ಪರಿಶ್ರಮ, ಛಲದಿಂದ ವಿಶ್ವ ದಾಖಲೆಯಾಗಿದೆ.

**- ರೆಮೋನಾ ಎವೆಟ್ ಪಿರೇರಾ**, ಸಾಧಕಿ



Vijayavani 29-7-2025

170 ತಾಸು ನಿರಂತರ ನೃತ್ಯ ಪ್ರದರ್ಶನ | ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್

# ಭರತನಾಟ್ಯದಲ್ಲಿ ವಿಶ್ವ ದಾಖಲೆ ಬರೆದ ಕುಡ್ಲ ಕುವರಿ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ರೆಮೋನಾ ಎವೆಟ್ ಪಿರೇರಾ 170 ತಾಸು ನಿರಂತರ ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ಗೆ ಭಾಜನರಾಗಿದ್ದಾರೆ.

ನಿರಂತರ 7 ದಿನಗಳ ಪ್ರದರ್ಶನದೊಂದಿಗೆ ದೀರ್ಘಾವಧಿಯ ನೃತ್ಯದ ದಾಖಲೆ ಇದಾಗಿದೆ. ಸೃಷ್ಟಿ ಸುಧೀರ್ ಜಗ್ತಾಪ್ ಹೆಸರಿನಲ್ಲಿದ್ದ ಈವರೆಗಿನ 127 ತಾಸಿನ ದಾಖಲೆ ಮುರಿದ ರೆಮೋನಾ ಅವರಿಗೆ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನ ಭಾರತದ ಪ್ರಮುಖರಾದ ಡಾ.ಮನೀಶ್ ವಿಷ್ಣೋಯಿ ಪ್ರಮಾಣಪತ್ರ ಪ್ರದಾನ ಮಾಡಿದರು.

ಜುಲೈ 21ರಂದು ಬೆಳಗ್ಗೆ 10ಕ್ಕೆ ಸಂತ ಅಲೋಶಿಯಸ್‌ನ ಎಲ್‌ಸಿಆರ್‌ಐ ರಾಬರ್ಟ್ ಸಿಕ್ವೆರಾ ಸಭಾಂಗಣದಲ್ಲಿ ಭರತನಾಟ್ಯ ಆರಂಭಿಸಿದ ರೆಮೋನಾ ಜುಲೈ 28ರ ಮಧ್ಯಾಹ್ನ 12ರವರೆಗೆ ನೃತ್ಯ ಮುಂದುವರಿಸಿದ್ದರು. 7 ದಿನಗಳ ಕಾಲ 3 ತಾಸಿನ ಮಧ್ಯೆ 15 ನಿಮಿಷಗಳ ವಿರಾಮದ ಮೂಲಕ ಸತತ 170 ತಾಸು ಪ್ರದರ್ಶನ ನೀಡಿದ್ದಾರೆ. ಭರತನಾಟ್ಯದ 108 ಕರಣಗಳನ್ನು ಅಭ್ಯಾಸ ಮಾಡಿದ್ದು, 25ಕ್ಕೂ ಅಧಿಕ ಕರಣಗಳನ್ನು ಪ್ರದರ್ಶಿಸಿದ್ದಾರೆ. ಪ್ರಮಾಣಪತ್ರ ಹಸ್ತಾಂತರ ಸಮಾರಂಭದಲ್ಲಿ ರೆಮೋನಾ ತಾಯಿ ಗ್ಲಾಡಿಸ್, ಸಂತ ಅಲೋಶಿಯಸ್ ಸಂಸ್ಥೆ ರೆಕ್ಟರ್ ಮೆಲ್ವಿನ್ ಜೆ.ಪಿಂಟೋ, ಸಂತ ಅಲೋಶಿಯಸ್ ವಿವಿ ಉಪಕುಲಪತಿ ಡಾ.ಪ್ರವೀಣ್ ಮಾರ್ಟಿಸ್, ಎಂಎಲ್‌ಸಿ ಐವನ್ ಡಿಸೋಜ, ನೃತ್ಯಗುರು ಡಾ.ವಿದ್ಯಾ ಮುರಳೀಧರ್ ಮತ್ತಿತರರು ಇದ್ದರು.



ವಿಜಯವಾಣಿ

ರೆಮೋನಾ ಎವೆಟ್ ಪಿರೇರಾ ಅವರಿಗೆ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನ ಭಾರತದ ಪ್ರಮುಖರಾದ ಡಾ.ಮನೀಶ್ ವಿಷ್ಣೋಯಿ ಪ್ರಮಾಣಪತ್ರ ಪ್ರದಾನ ಮಾಡಿದರು. ರೆಮೋನಾ ತಾಯಿ ಗ್ಲಾಡಿಸ್, ಅಲೋಶಿಯಸ್ ಸಂಸ್ಥೆ ರೆಕ್ಟರ್ ಮೆಲ್ವಿನ್ ಜೆ.ಪಿಂಟೋ, ಉಪಕುಲಪತಿ ಡಾ.ಪ್ರವೀಣ್ ಮಾರ್ಟಿಸ್, ಎಂಎಲ್‌ಸಿ ಐವನ್ ಡಿಸೋಜ, ನೃತ್ಯಗುರು ಡಾ.ವಿದ್ಯಾ ಮುರಳೀಧರ್ ಮತ್ತಿತರರು ಇದ್ದರು



ದಾಖಲೆ ಮಾಡಬಲ್ಲೆ ಎಂದು ನನಗೆ ಪ್ರೋತ್ಸಾಹ ನೀಡಿದ ಸಹಪಾಠಿಗಳು, ಗುರುಗಳು ಹಾಗೂ ಪಾಲಕರಿಗೆ ಈ ಯಶಸ್ಸು ಸಲ್ಲಬೇಕು. ನಾನು ನೃತ್ಯಾಭ್ಯಾಸಕ್ಕೆ ಯಾವ ರೀತಿ ಪೂರ್ವ ತಯಾರಿ ಮಾಡಿದ್ದೇನೋ ಅದೇ ರೀತಿಯ ಹಾವಭಾವ, ಭಂಗಿ ಕೊನೆಯ ದಿನದವರೆಗೂ ಇತ್ತು. ಗುರುಗಳ ಮಾರ್ಗದರ್ಶನದಿಂದ ಇದು ಸಾಧ್ಯವಾಗಿದೆ.

| ರೆಮೋನಾ ಎವೆಟ್ ಪಿರೇರಾ
ನೃತ್ಯಪಟು

Samyukta Karnataka 29-7-2025

# ಏಳು ದಿನ ನಿರಂತರ ಭರತನಾಟ್ಯ: ರೆಮೋನಾ ಪಿರೇರಾ ವಿಶ್ವ ದಾಖಲೆ

**ಮಂಗಳೂರು:** ಏಳು ದಿನಗಳಿಂದ ನಿರಂತರ ಭರತನಾಟ್ಯ ಪ್ರದರ್ಶನ ನೀಡಿ ದಾಖಲೆ ಮಾಡುವ ಮೂಲಕ ಮಂಗಳೂರಿನ ರೆಮೋನಾ ಪಿರೇರಾ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ತನ್ನ ಹೆಸರು ನಮೂದಿಸಿದ್ದಾರೆ.



ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ರೆಮೋನಾ ಪಿರೇರಾ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ತಂಡದಿಂದ ಅಧಿಕೃತವಾಗಿ ಘೋಷಣೆ ಪಡೆದುಕೊಂಡು, ಪ್ರಶಸ್ತಿ ಸ್ವೀಕರಿಸಿದರು.

ಮಂಗಳೂರಿನ ಸಂತ ಅಲೋಶಿಯಸ್ ವಿ.ವಿ.ಯ ವಿದ್ಯಾರ್ಥಿನಿ ರೆಮೋನಾ ಅವರು ಇದೇ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಜು. 21ರಂದು ಬೆಳಗ್ಗೆಯಿಂದ ಆರಂಭಿಸಿದ ಭರತನಾಟ್ಯ ಪ್ರದರ್ಶನ ಹಗಲು-ರಾತ್ರಿ ನಿರಂತರವಾಗಿ ಜು. 28ರ ಮಧ್ಯಾಹ್ನವರೆಗೆ ನಡೆದಿತ್ತು. ಈ ಮೂಲಕ 170 ಗಂಟೆಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಲಾತೂರ್‌ನ 16 ವರ್ಷದ ಸುಧೀರ್ ಜಗಪತ್ ಅವರು 2023ರಲ್ಲಿ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವುದು ಈವರೆಗಿನ ದಾಖಲೆ. ರೆಮೋನಾ ಪಿರೇರಾ ಅವರು ಈ ದಾಖಲೆಯನ್ನು ಜು. 26ರ ಸಂಜೆಯೇ ಮುರಿದಿದ್ದು ಸೋಮವಾರ ಮಧ್ಯಾಹ್ನದವರೆಗೆ ಭರತನಾಟ್ಯ ಪ್ರದರ್ಶನವನ್ನು ಮುಂದುವರೆಸಿದ್ದರು. ಪ್ರತೀ 3 ಗಂಟೆಗೆ 15 ನಿಮಿಷ ಮಾತ್ರ ಬಿಡುವು ಇರುತ್ತಿತ್ತು. ರೆಮೋನಾ ಅವರ ಸಾಧನೆಗೆ ಜನಪ್ರತಿನಿಧಿಗಳು ಸೇರಿದಂತೆ ಗಣ್ಯರು, ಸಾರ್ವಜನಿಕರು ಅಭಿನಂದಿಸಿದ್ದಾರೆ.

Indian Express 28-7-2025

# Mangaluru girl all set for world record in Bharatanatyam

EXPRESS NEWS SERVICE
@ Mangaluru

Remona Evette Pereira, a final year BA student of St Aloysius (Deemed to-be University) in Mangaluru is all set to enter in the Golden Book of World Records through continuous seven-day Bharatanatyam performance.

Remona began her record breaking performance on July 21 at her college and she is scheduled to conclude her performance at 1 pm on July 28, attempting to set a record at 170 hours. Sudhir Jagpath, a 16-year-old boy holds the current record, having performed Bharatanatyam for 127 hours.

Remona as part of her dance marathon, would perform continuously with a short break of 15 minutes every three hours. By Sunday, she had completed 150 hours and the entire performance is being recorded. She is on her path to achieve the feat on July 28. Remona's mother Gladis Pereirra said that she is proud to witness her daughter on a mission to set a world record. "She aims to teach Bharatanatyam to the orphans, persons with disabilities and transgender persons in the future, and is planning to pursue PhD in Bharatanatyam," her mother said. Remona is also a receipient of Pradhan Mantri Rastriya Bal Puraskar in 2022.

Remona started learning Bharatanatyam at the age of 3 under Shrividya Muralidhar and she did the Rangapravesha in 2019.



Remona Evette Pereira performing at her college to break the world record

Vijayakarnataka 29-7-2025

# ನಾಟ್ಯದಲ್ಲಿ ರೆಮೋನಾ ಗೋಲ್ಡನ್ ಬುಕ್ ಆಫ್ ರೆಕಾರ್ಡ್

## 170ಗಂಟೆಗಳ ಕಾಲ ನೃತ್ಯ ಪ್ರದರ್ಶನ | ಸಹಪಾಠಿ, ಅಭಿಮಾನಿಗಳ ಸಂಭ್ರಮ

**ಮಂಗಳೂರು:** ಭರತನಾಟ್ಯದಲ್ಲಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ 7ದಿನಗಳ ಕಾಲ 170 ಗಂಟೆ 10,500 ನಿಮಿಷಗಳ ಕಾಲ ನೃತ್ಯ ಪ್ರದರ್ಶನ ಮಾಡಿ ರೆಮೋನಾ ಇವೆಟಾ ಪಿರೇರಾ ಹೊಸ ದಾಖಲೆ ಮಾಡಿದ್ದಾರೆ. ಈ ಮೂಲಕ ನಗರದ ಸಂತ ಅಲೋಶಿಯಸ್ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿನಿ ಹೊಸ ದಾಖಲೆಗೆ ಸಾಕ್ಷಿಯಾಗಿದ್ದಾರೆ.

ಭಾರತದ ಸೃಷ್ಟಿ ಸುಧೀರ್ ಜಗ್ತಾಪ್ ಹೆಸರಿನಲ್ಲಿ 127 ಗಂಟೆಗಳ ವಿಶ್ವದ ಈವರೆಗಿನ ದಾಖಲೆಯಿದ್ದು, ಅದನ್ನು ಈಗಾಗಲೇ ಹಲವು ದಾಖಲೆಗಳ ಮೂಲಕ ಗಮನ ಸೆಳೆದಿರುವ ನೃತ್ಯ ಪಟು ರೆಮೋನಾ ಇವೆಟಾ ಪಿರೇರಾ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಭಾರತದ ಪ್ರಮುಖರಾದ ಡಾ. ಮನೀಶ್ ವಿಷ್ಣೋಯಿ ಅವರು ನೂತನ ದಾಖಲೆಯ ಪ್ರಮಾಣ ಪತ್ರವನ್ನು ಪ್ರದಾನ ಮಾಡಿದರು. ಸತತ 7ದಿನಗಳ ಕಾಲ ಮೂರು ಗಂಟೆಗಳ ನಡುವೆ 15 ನಿಮಿಷಗಳ ವಿರಾಮದ ಮೂಲಕ ಸತತ 170 ಗಂಟೆಗಳ ಭರತ ನಾಟ್ಯವನ್ನು ಪ್ರದರ್ಶಿಸಿದ್ದಾರೆ.

**ದಣಿವರಿಯದ ರೆಮೋನಾ:** ನೃತ್ಯ ಅದೆಷ್ಟು ರೆಮೋನಾರ ಮನ ಮನಸ್ಸುಗಳಲ್ಲಿ ಸೇರಿದೆಯೆಂಬುದಕ್ಕೆ ಆಕೆ ರೆಕಾರ್ಡ್‌ಗಾಗಿನ 170 ಗಂಟೆಗಳ ಪ್ರದರ್ಶನದ ಬಳಿಕ ವೇದಿಕೆಯ ಮೇಲೆ ನೀಡಿದ ಪ್ರದರ್ಶನ ಸಾಕ್ಷಿಯಾಯಿತು. ದಾಖಲೆ ನಿರ್ಮಾಣದ ಅವಧಿ ಮುಗಿದ ಬಳಿಕ ಭರತನಾಟ್ಯದ ಸಾಂಪ್ರದಾಯಿಕ ಉಡುಗೆ ತೊಟ್ಟು ವೇದಿಕೆಯ ಮೇಲೆ ಸುಮಾರು 10 ನಿಮಿಷಗಳ ಪ್ರದರ್ಶನ ವೀಕ್ಷಕರನ್ನು ನಿಬ್ಬೆರಗಾಗಿಸಿತು. ಸ್ನೇಹಿತರು ಶಿಳ್ಳೆ, ಕರತಾಡನದೊಂದಿಗೆ ಹುರಿದುಂಬಿಸಿದರೆ, ಆಕೆ ತನ್ನೆಲ್ಲಾ ಆಯಾಸ, ಪ್ರಯಾಸವನ್ನು ಬದಿಗೊತ್ತಿ ದಣಿವೇ ಇಲ್ಲದಂತೆ, 'ಘಟಂ' ಮೇಲೇರಿ ನೃತ್ಯ ಪ್ರದರ್ಶಿಸಿದರು.

ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಭಾರತೀಯ ಪ್ರತಿನಿಧಿ ಡಾ.ಮನೀಶ್ ವಿಷ್ಣೋಯಿ ಮಾತನಾಡಿ, ಅಮೆರಿಕ ಮೂಲದ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ಪರಿಗಣಿಸಲಾಗುತ್ತದೆ. ಭಾರತದ ಶಾಸ್ತ್ರೀಯ ನೃತ್ಯ ಕಲೆಗಳಲ್ಲಿ ಭರತನಾಟ್ಯ ಅತ್ಯಂತ ಕ್ಲಿಷ್ಟಕರ ನೃತ್ಯವಾಗಿ ಗುರುತಿಸಿಕೊಂಡಿದೆ. 10,200 ನಿಮಿಷ ಭರತನಾಟ್ಯ ಪ್ರದರ್ಶಿಸಿ ರೆಮೋನಾ ದಾಖಲೆ ಮಾಡಿದ್ದಾರೆ. ಸಂತ ಅಲೋಶಿಯಸ್ ವಿವಿ ಉಪಕುಲಪತಿ ರೆ.ಫಾ. ಡಾ.ಪ್ರವೀಣ್ ಮಾರ್ಟಿಸ್ ಮಾತನಾಡಿ, ಆಕೆ ಬಿಎ ಪದವಿಗೆ ಸಂಸ್ಥೆಗೆ ಸೇರುವ ಸಂದರ್ಭದಲ್ಲಿಯೇ ನೃತ್ಯದಲ್ಲಿ ದಾಖಲೆ ಮಾಡುವ ಬಗ್ಗೆ ಹೇಳಿಕೊಂಡಿದ್ದರು. ಆಕೆ ತನ್ನ ಸಾಧನೆಯ ಗುರಿ ಮುಟ್ಟುವ ಮೂಲಕ ಸಂಸ್ಥೆಗೂ ಕೀರ್ತಿ ತಂದಿದ್ದಾಳೆ ಎಂದರು. ಈ ಸಂದರ್ಭ ರೆಮೋನಾ ಅವರ ನೃತ್ಯಶಿಕ್ಷಕಿ ಡಾ.ಶ್ರೀವಿದ್ಯಾ ಮುರಳೀಧರ್, ರೆಮೋನಾ ತಾಯಿ ಗ್ಲಾಡಿಸ್ ಪಿರೇರಾ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ರೆಕ್ಟರ್ ಮೆಲ್ವಿನ್ ಡಿಕುನ್ಹಾ ಉಪಸ್ಥಿತರಿದ್ದರು.



ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆ.

> **ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಮಾಡುವುದು ನನ್ನ ಗುರಿಯಾಗಿದ್ದು, ಆ ಸಾಧನೆ ಮಾಡಿರುವುದು ತುಂಬಾ ಖುಷಿ ನೀಡಿದೆ. ತನ್ನ ಈ ಸಾಧನೆಗೆ ಸಹಕರಿಸಿದ ಪರಮಾತ್ಮ, ತಾಯಿ, ಶಿಕ್ಷಕರು, ಕಾಲೇಜು ಆಡಳಿತ ಮಂಡಳಿ ಸಹಕಾರ ಕಾರಣವಾಗಿದೆ. ಪ್ರೋತ್ಸಾಹ ನೀಡಿದ ತನ್ನ ಸಹಪಾಠಿಗಳಿಗೆ ಧನ್ಯವಾದ.**
> **-ರೆಮೋನಾ,** ದಾಖಲೆ ನಿರ್ಮಿಸಿದ ಭರತನಾಟ್ಯ ಕಲಾವಿದೆ.

Times of India 29-7-2025

# Girl sets record with 170-hour Bharatanatyam marathon

TIMES NEWS NETWORK

Pics: Ravi Posavanike

**Mangaluru:** Remona Evette Pereira, third-year BA student at St Aloysius (Deemed to Be University), entered the Golden Book of World Records with a 170-hour Bharatanatyam dance marathon. The marathon at St Aloysius College campus began on July 21 and ended at 12.20pm on Monday, after which she was handed a provisional certificate.

During the record-setting feat, she took a short break of 15 minutes for every three hours.

Christopher D'Souza, director of Ranga Adhyayana Kendra at the college, told TOI: "We are happy and proud of her. I have observed her over the past few years and she is hardworking and incredibly sincere. Given her potential, this feat is just the beginning."

After the record-setting feat, St Aloysius (Deemed to be University) VC Praveen Martis welcomed Remona with the national flag, after she was brought in a procession.

Dressed in the traditional Bharatanatyam attire, Remona captivated the audience with a stunning 10-minute performance, even after completing her official attempt.

Speaking to reporters, Remona expressed her gratitude to the almighty, her mother Gladis Pereira, teachers, and classmates, especially those who constantly encouraged her.

Remona's passion for Bharatanatyam began early — she started learning at the age of three under Shrividya Muralidhar, and had Rangapravesha in 2019. Remona received Pradhan Mantri Rashtriya Bal Puraskar-2022 and holds a few other records in her name.





**DETERMINED & DEDICATED:** Remona Evette Pereira on Monday etched her name in the Golden Book of Records with 170-hour Bharatanatyam dance marathon. (Right) Remona being given a provisional certificate after she set the record

Deccan Herald 29-7-2025

RECORD FEAT

# Remona enters Golden Book of World Records for longest Bharatanatyam performance

MANGALURU, DHNS

The 170-hour Bharatanatyam dance marathon by Remona Evette Pereira ended with thunderous applause at the LCRI Auditorium in St Aloysius (Deemed to be University) on Monday.

Remona had started her Bharatanatyam marathon at 10 am on July 21 and danced till noon on Monday.

Beginning with an invocation to Lord Ganesha, Remona concluded her record marathon with a performance of a devotional song on Goddess Durga. Thus, defying all odds, Remona etched her name in the Golden Book of World Records.

Later, at a programme, Remona was conferred with the 'Certificate of Excellence' for the longest Bharatanatyam performance, by the Head of Golden Book of World Records Manish Vishnoei.

The previous world record of 127 hours of Bharatanatyam performance was set by Sudhir Jagtap.

When she was invited onto the stage to receive her certificate, her Bharatanatyam classmates welcomed her into the auditorium with a Bharatanatyam procession.

On stage, her peers also portrayed the journey of her achievement through a dance. "She danced for 170 hours, taking a 15-minute break every three hours," a member of the team said.

Manish said that Remona's dedication towards this world record-setting marathon was for everyone to see.

"Bharatanatyam is a difficult dance form. Yet, Remona took up the challenge and danced for 10,200 minutes with curtailed breaks and rest, which is almost impossible to achieve by many," Manish said.

He recollected advising her to embark on the challenge for five days to set the record. "She insisted on dancing for seven days, which shows her commitment and resilience," he emphasised.

Remona's mother Gladis Celine said, "I stood by her side at every step of her Bharatanatyam journey through every crest and thought that life posed to them."

"My heart swells with pride to see my daughter's dream come true. Her efforts have paid off and I couldn't have wished for anything better for her," stressed Gladis while expressing her gratitude to all those who had supported Remona studying in the BA final year at St Aloysius Deemed to be University.

"Our student Remona's dedication towards Bharatanatyam makes her the golden girl of Mangaluru, the country and the world," St Aloysius Deemed to be University Vice Chancellor Fr Praveen Martis said.

Remona proved to the world that anything can be accomplished with resilience and passion, he said.

Lauding the achievement, MLC Ivan D'Souza said, "She's an inspiration to every one of us. St Aloysius Deemed to be University must be commended for providing Remona with the platform and encouraging her in pursuing this record-setting marathon."

Remona, also a Pradhan Mantri Bal Puraskar recipient, said the 170-hour dance marathon was not a mere performance, but her tribute to the indelible tradition and cultural significance of Indian classical dance.

Dance teacher Vidya Muralidhar guided her in her pursuit of Bharatanatyam, she revealed with gratitude.



Remona Evette Pereira with the Golden Book of World Records Asia head Manish Vishnoei after entering the Golden Book of World Records for the longest performance of Bharatanatyam dance in Mangaluru on Monday.

Prajavani 29-7-2025

### ದೇಹ ದಣಿದರೂ ಮಾಸದ ನಗು, ಕಲಾವಿದೆಯ ಸಾಧನೆಗೆ ಪ್ರೇಕ್ಷಕರು ನಿಬ್ಬೆರಗು

# ರೆಮೋನಾ ಭರತನಾಟ್ಯ ವಿಶ್ವ ದಾಖಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಎಲ್ಲರ ಲಕ್ಷ್ಯವೂ ಸೇಂಟ್ ಅಲೋಶಿಯಸ್ ಕಾಲೇಜಿನ ಎಲ್‌ಸಿಆರ್‌ಐ ಸಭಾಂಗಣದತ್ತ ನೆಟ್ಟಿತ್ತು. ಕಲಾವಿದೆ ರೆಮೋನಾ ಇವೆಟ್ ಪಿರೇರಾ ಯಶಸ್ವಿಯಾಗಿ, 170 ತಾಸು ಭರತನಾಟ್ಯ ಪ್ರದರ್ಶನ ನೀಡಿ, ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ತಮ್ಮ ಹೆಸರು ದಾಖಲಿಸುವ ಅಪೂರ್ವ ಕ್ಷಣಕ್ಕೆ ಕಾತರರಾಗಿದ್ದರು.

ಸೋಮವಾರ ಮಧ್ಯಾಹ್ನ 12.30ಕ್ಕೆ ರೆಮೋನಾ ಅವರ ಭರತನಾಟ್ಯ ಪ್ರದರ್ಶನ 170 ತಾಸು ಪೂರ್ಣಗೊಂಡಾಗ, ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಕರತಾಡನದ ಪ್ರಶಂಸೆ. ಎಲ್ಲರಿಗೂ ತಲೆಬಾಗಿ ನಮಸ್ಕರಿಸಿದ ರೆಮೋನಾ, ಭರತನಾಟ್ಯದ ಧಿರಿಸಿನಲ್ಲಿ ಅಂತಿಮ ಪ್ರದರ್ಶನಕ್ಕೆ ಅಣಿಯಾಗಿ ಬಂದರು.



ರೆಮೋನಾ ಪಿರೇರಾ

ಅವರ ಸಹಪಾಠಿಗಳು, ಒಡನಾಡಿಗಳು ಮೆರವಣಿಗೆಯಲ್ಲಿ ಅವರನ್ನು ವೇದಿಕೆಗೆ ಕರೆತಂದರು. ಶಿವನನ್ನು ಸ್ತುತಿಸಿದ ರೆಮೋನಾ, ವಂದೇ ಮಾತರಂನೊಂದಿಗೆ ಪ್ರದರ್ಶನಕ್ಕೆ ಮಂಗಲ ಹಾಡಿದರು.

ಪ್ರಮಾಣಪತ್ರ ವಿತರಿಸಿದ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನ ಏಷ್ಯಾ ಮುಖ್ಯಸ್ಥ ಮನೀಷ್ ವಿಷ್ಣೋಯಿ 'ರೆಮೋನಾ 10,200 ನಿಮಿಷಗಳ ಕಾಲ ಭರತನಾಟ್ಯ ಪ್ರದರ್ಶಿಸಿದ್ದಾರೆ. ಐದು ದಿನಗಳಲ್ಲಿ ಅವರು ಹಳೆಯ ದಾಖಲೆಯನ್ನು ಮೀರಿದ್ದರೂ, ಸಮರ್ಪಣಾ ಭಾವದಿಂದ ಏಳು ದಿನಗಳವರೆಗೆ ನೃತ್ಯ ಪ್ರದರ್ಶನ ಮಾಡಿದ್ದಾರೆ' ಎಂದರು.

ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ಫಾ. ಮೆಲ್ವಿನ್ ಪಿಂಟೊ ರೆಮೋನಾ ಅವರನ್ನು ಸನ್ಮಾನಿಸಿದರು. ನೃತ್ಯ ಗುರು ಶ್ರೀವಿದ್ಯಾ ಮುರಳೀಧರ್ ನಟರಾಜ ಮೂರ್ತಿ ನೀಡಿ, ಬೆನ್ನುತಟ್ಟಿದರು.

## ಪ್ರಯತ್ನಕ್ಕೆ ಫಲ

'ಮಗಳ ಪ್ರತಿ ಹೆಜ್ಜೆಯಲ್ಲೂ ನಾನು ಅವಳ ಜೊತೆಯಾಗಿದ್ದೆ. ನನ್ನ ಮಗಳ ಕನಸು ನನಸಾಗಿರುವುದಕ್ಕೆ ಹೃದಯ ತುಂಬಿ ಬಂದಿದೆ. ಅವಳ ಪ್ರಯತ್ನಕ್ಕೆ ಫಲ ದೊರೆತಿದೆ. ನಾನು ಇನ್ನು ಹೆಚ್ಚೇನೂ ಅವಳಿಂದ ಬಯಸುವುದಿಲ್ಲ' ಎಂದು ರೆಮೋನಾ ತಾಯಿ ಗ್ಲಾಡಿಸ್ ಸೆಲೀನ್ ಹೇಳಿದರು.

ಇಡೀ ಕರ್ನಾಟಕವೇ ಹೆಮ್ಮೆಪಡುವ ದಾಖಲೆ ಮಾಡಿದ್ದಾರೆ ರೆಮೋನಾ. ಇನ್ನು ಮುಂದೆ ನಿಮ್ಮ ದಾಖಲೆಯನ್ನು ನೀವೇ ಮುರಿಯಬೇಕು

**ಐವನ್ ಡಿಸೋಜ,**
ವಿಧಾನಪರಿಷತ್ ಸದಸ್ಯ

ಅಮ್ಮ, ನೃತ್ಯಗುರು, ಸೇಂಟ್ ಅಲೋಶಿಯಸ್ ಕಾಲೇಜಿನವರು ನೀಡಿದ ಬೆಂಬಲ ಈ ದಾಖಲೆ ಬರೆಯಲು ಸಾಧ್ಯವಾಗಿದೆ

**ರೆಮೋನಾ ಪಿರೇರಾ,**
ಸಾಧಕಿ

ಜುಲೈ 21ರಂದು ಬೆಳಿಗ್ಗೆ 10 ಗಂಟೆಗೆ ಗೆಜ್ಜೆ ಕಟ್ಟಿ ಗಣಪತಿ ಸ್ತುತಿಯೊಂದಿಗೆ ನೃತ್ಯ ಆರಂಭಿಸಿದ ರೆಮೋನಾ, ಜು.28ರಂದು ಮಧ್ಯಾಹ್ನ 12.30 ಗಂಟೆಗೆ ದೇವಿ ಆರಾಧನೆಯೊಂದಿಗೆ ನೃತ್ಯ ಪ್ರದರ್ಶನ ಮುಕ್ತಾಯಗೊಳಿಸಿದರು.

'ಸಾಧನೆಗೆ ಆಕಾಶವೇ ಗುರಿ ಎಂಬುದನ್ನು ರೆಮೋನಾ ನಿರೂಪಿಸಿದ್ದಾರೆ. ಏಳು ದಿನ ನಿದ್ರೆಯಿಲ್ಲದೆ ರಾತ್ರಿ ಕಳೆಯುವುದು, ನಿರಂತರ ಭರತನಾಟ್ಯ ಪ್ರದರ್ಶಿಸುವುದು ಸುಲಭವಲ್ಲ, ಇದು ಬರೀ ಪ್ರದರ್ಶನವಲ್ಲ, ಇದೊಂದು ಧ್ಯಾನ, ತಪಸ್ಸು. ಜಾತ್ರೆಯಂತೆ ಜನರು ಬಂದು ಅವರನ್ನು ಬೆಂಬಲಿಸಿದ್ದಾರೆ, ಅಧಿಕಾರಿಗಳು, ಜನಪ್ರತಿನಿಧಿಗಳು, ಸಾರ್ವಜನಿಕರು, ಆಕೆಯ ಸ್ನೇಹಿತೆ ಯರು ಹಗಲು–ರಾತ್ರಿ ಕುಳಿತು, ಚಪ್ಪಾಳೆ ಮೂಲಕ ಆಕೆಯಲ್ಲಿ ವಿಶ್ವಾಸ ತುಂಬಿದ್ದಾರೆ' ಎಂದು ಮೆಲ್ವಿನ್ ಪಿಂಟೊ ಹೇಳಿದರು.

ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್ ಮಾತನಾಡಿ, 'ದೈವಿಕ ಶಕ್ತಿ ರೆಮೋನಾಳ ಬೆನ್ನಿಗಿದೆ, ಅಸಾಧ್ಯವಾದುದನ್ನು ಸಾಧ್ಯವಾಗಿಸಿದ ಸಾಧಕಿ ಅವರು' ಎಂದರು.

ಈವರೆಗೆ ಇದ್ದ ಕಲಾವಿದ ಸುಧೀರ್ ಜಗತಾಪ್ ಅವರ 127 ಗಂಟೆಗಳ ವಿಶ್ವ ದಾಖಲೆಯನ್ನು ರೆಮೋನಾ ಮುರಿದರು.



Kannada Prabha 29-7-2025

# 170 ಗಂಟೆ ಭರತನಾಟ್ಯ ಪ್ರದರ್ಶನ: ವಿಶ್ವ ದಾಖಲೆ ಸೃಷ್ಟಿಸಿದ ರೆಮೋನಾ!

• **ಕನ್ನಡಪ್ರಭ ವಾರ್ತೆ** ಮಂಗಳೂರು

ಸುದೀರ್ಘ ಏಳು ದಿನ- 170 ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶನ ನೀಡುವ ಮೂಲಕ ಈ ಹಿಂದಿನ ವಿಶ್ವ ದಾಖಲೆಯನ್ನು ಮುರಿದು ನಗರದ ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ, ನೃತ್ಯಪಟು ರೆಮೋನಾ ಎವೆಟ್ ಪಿರೇರಾ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ಸೇರ್ಪಡೆಯಾಗಿದ್ದಾರೆ.

ಈ ಹಿಂದೆ ಈ ವಿಶ್ವ ದಾಖಲೆಯು 127 ಗಂಟೆಗಳ ಭರತನಾಟ್ಯ ಪ್ರದರ್ಶನ ನೀಡಿದ ಭಾರತದ ಸೃಷ್ಟಿ ಸುಧೀರ್ ಜಗ್ತಾಪ್ ಹೆಸರಿನಲ್ಲಿತ್ತು. ಈ ದಾಖಲೆಯನ್ನು ರೆಮೋನಾ ಎವೆಟ್ ಪಿರೇರಾ ಹಿಂದಿಕ್ಕಿ ಹೊಸ ವಿಶ್ವದಾಖಲೆ ನಿರ್ಮಿಸಿದ್ದಾರೆ. ಸೋಮವಾರ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಭಾರತದ ಪ್ರತಿನಿಧಿ ಡಾ. ಮನೀಶ್ ವಿಷ್ಣೋಯಿ ಅವರು ಈ ದಾಖಲೆಯ ಪ್ರಮಾಣ ಪತ್ರವನ್ನು ಪ್ರದಾನ ಮಾಡಿದರು.

ನಗರದ ಸಂತ ಅಲೋಶಿಯಸ್ ಕಾಲೇಜಿನ ಎಲ್‌ಐಸಿಆರ್ ರಾಬರ್ಟ್ ಸಿಕ್ವೇರಾ ಸಭಾಂಗಣದಲ್ಲಿ ಜು.21ರಂದು ಬೆಳಗ್ಗೆ 10 ಗಂಟೆಗೆ ಭರತನಾಟ್ಯ ಪ್ರದರ್ಶನ ಆರಂಭಿಸಿದ್ದ ರೆಮೋನಾ ಜು.28ರಂದು ಮಧ್ಯಾಹ್ನ 12 ಗಂಟೆಯವರೆಗೆ ನೃತ್ಯ ಮುಂದುವರಿಸಿದ್ದರು. ಮೂರು ಗಂಟೆಗೊಮ್ಮೆ 15 ನಿಮಿಷ ವಿರಾಮದೊಂದಿಗೆ ಸತತ 7 ದಿನಗಳ ಕಾಲ ಭರತನಾಟ್ಯ ಪ್ರದರ್ಶನ ನೀಡಿದ್ದಾರೆ. ಶ್ರೀ ಗಣೇಶನ ಸ್ತುತಿಯೊಂದಿಗೆ ಪ್ರದರ್ಶನ ಆರಂಭಿಸಿ ದುರ್ಗೆಯ ಹಾಡಿನೊಂದಿಗೆ ದಾಖಲೆಯ ಪ್ರದರ್ಶನ ಸಂಪನ್ನಗೊಳಿಸಿದರು. ಕಳೆದ ಒಂದು ವಾರದ ಅವಧಿಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಸಾವಿರಾರು ಮಂದಿ



ರೆಮೋನಾ ಭರತನಾಟ್ಯ ಪ್ರದರ್ಶನ ವೀಕ್ಷಣೆಗೆ ಆಗಮಿಸಿದ್ದರು.

ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಪ್ರಮಾಣ ಪತ್ರ ಹಸ್ತಾಂತರ ಸಮಾರಂಭದಲ್ಲಿ ನೃತ್ಯ ಗುರು ವಿದ್ಯಾ ಮುರಳೀಧರ್, ರೆಮೋನಾ ತಾಯಿ ಗ್ಲ್ಯಾಡಿಸ್, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಸಂತ ಅಲೋಶಿಯಸ್ ಸಂಸ್ಥೆಯ ರೆಕ್ಟರ್ ರೆ.ಫಾ. ಮೆಲ್ವಿನ್ ಜೆ. ಪಿಂಟೋ ಇದ್ದರು.

ರೆಮೋನಾ ವಿಶ್ವ ದಾಖಲೆಯ ಕುರಿತು ಪ್ರತಿಕ್ರಿಯಿಸಿದ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಭಾರತೀಯ ಪ್ರತಿನಿಧಿ ಡಾ. ಮನೀಶ್ ವಿಷ್ಣೋಯಿ, ರೆಮೋನಾ ಅವರು ಭರತನಾಟ್ಯದ 7 ದಿನಗಳ ಮಾರಥಾನ್ ಬಗ್ಗೆ ಸಂಸ್ಥೆಗೆ ಕೋರಿಕೊಂಡಾಗ, ರೆಕಾರ್ಡ್‌ಗೆ 5 ದಿನಗಳ ನಿರಂತರ ನೃತ್ಯ ಸಾಕು ಎಂದಿದ್ದೆವು. ಆದರೆ ಆಕೆ ಮಾತ್ರ 7 ದಿನಗಳ ಕಾಲ ನೃತ್ಯ ಮಾಡುವುದಾಗಿ ಆರಂಭದಲ್ಲಿಯೇ ಹೇಳಿಕೊಂಡಿದ್ದಳು. ಆ ಮೂಲಕ 10,200 ನಿಮಿಷಗಳ ನೃತ್ಯ ದಾಖಲೆ ಮಾಡಿದ್ದಾರೆ ಎಂದು ತಿಳಿಸಿದರು.

Indian Express 30-7-2025

# Remona dances into history with 170-hour Bharatanatyam feat

EXPRESS NEWS SERVICE
@ Mangaluru

REMONA Evette Pereira, a third year BA student from St. Aloysius (Deemed to-be University), Mangaluru, set a world record with 170 hour-long marathon Bharatanatyam performance on Monday. She has entered the Golden Book of World Records with this performance.

Her performance began on July 21 at the institute auditorium by offering prayers to Lord Ganesha and her performance ended on Monday with a ballet and a prayer to Goddess Durga.

India Representative of the Golden Book of World Records, Manish Vishnoi, handed over the certificate to Remona in the presence of Vice-chancellor of St Aloysius (Deemed to-be University) Praveen Martis. Her dance Guru Shrividya Muralidhar lauded Remona's performance and said she is a pride of India. A 16-year-old boy named Sudhir Jagpath held the previous record who has performed Bharatanatyam for 127 hours. Remona as part of her dance marathon performed continuously with a short break of 15 minutes every three hours.



India Representative of the Golden Book of World Records, Manish Vishnoi, handed over the certificate to Remona in the presence of VC of St Aloysius Praveen Martis

> **Remona Evette Pereira aims to teach Bharatanatyam to orphans, persons with disabilities and transgender persons in future and is planning to pursue PhD in Bharatanatyam**
>
> Gladis Pereirra, Remona's mother

Remona's mother Gladis Pereirra said that she is proud to witness her daughter setting a world record. "She aims to teach Bharatanatyam to orphans, persons with disabilities and transgender persons in future and is planning to pursue PhD in Bharatanatyam," her mother said. Remona is also a recipient of Pradhan Mantri Rastriya Bal Puraskar in 2022.

Remona started learning Bharatanatyam at a young age of 3 under Shrividya Muralidhar and she did the Rangapravesha in 2019.

Hosadigantha 30-7-2025

# ಭರತನಾಟ್ಯದಲ್ಲಿ ವಿಶ್ವ ದಾಖಲೆ ಮಾಡಿದ ರೆಮೋನಾ ಪಿರೇರಾ



• **ಮಂಗಳೂರು:** 7 ದಿನಗಳಿಂದ ನಿರಂತರ ಭರತ ನಾಟ್ಯ ಪ್ರದರ್ಶನ ನೀಡಿ ದಾಖಲೆ ಮಾಡುವ ಮೂಲಕ ಮಂಗಳೂರಿನ ರೆಮೋನಾ ಪಿರೇರಾ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸೋಮವಾರ ತನ್ನ ಹೆಸರು ನಮೂದಿಸಿದ್ದಾರೆ.

ಸಂತ ಅಲೋಶಿಯಸ್ ವಿ.ವಿ.ಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರೆಮೋನಾ ಪಿರೇರಾ ಅವರು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ತಂಡದಿಂದ ಅಧಿಕೃತವಾಗಿ ಘೋಷಣೆ ಪಡೆದು ಕೊಂಡು, ಪ್ರಶಸ್ತಿ ಸ್ವೀಕರಿಸಿದರು.

ಮಂಗಳೂರಿನ ಸಂತ ಅಲೋಶಿಯಸ್ ವಿ.ವಿ.ಯ ವಿದ್ಯಾರ್ಥಿನಿ ರೆಮೋನಾ ಅವರು ಇದೇ ಕಾಲೇಜಿನ ರಾಬರ್ಟ್ ಸಿಕ್ವೇರಾ ಹಾಲ್‌ನಲ್ಲಿ ಜು. 21ರಂದು ಬೆಳಗ್ಗೆಯಿಂದ ಆರಂಭಿಸಿದ ಭರತ ನಾಟ್ಯ ಪ್ರದರ್ಶನ ಹಗಲು-ರಾತ್ರಿ ನಿರಂತರವಾಗಿ ಜು.28ರ ಮಧ್ಯಾಹ್ನದವರೆಗೆ ನಡೆದಿತ್ತು. ಈ ಮೂಲಕ 170 ಗಂಟೆಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಲಾತೂರ್‌ನ 19 ವರ್ಷದ ಸುಧೀರ್ ಜಗಪತ್ ಅವರು2023ರಲ್ಲಿ 127 ಗಂಟೆಗಳ ಕಾಲ ನಿರಂತರ ನೃತ್ಯ ಪ್ರದರ್ಶನ ನೀಡಿರುವುದು ಈವರೆಗಿನ ದಾಖಲೆ. ರೆಮೋನಾ ಪಿರೇರಾ ಅವರು ಈ ದಾಖಲೆಯನ್ನು ಜು.26 ರ ಸಂಜೆಯೇ ಮುರಿದಿದ್ದು ಸೋಮವಾರ ಮಧ್ಯಾಹ್ನದವರೆಗೆ ಭರತನಾಟ್ಯ ಪ್ರದರ್ಶನವನ್ನು ಮುಂದುವರೆಸಿದ್ದರು. ಪ್ರತೀ 3 ಗಂಟೆಗೆ 15 ನಿಮಿಷ ಮಾತ್ರ ಬಿಡುವು ಇರುತ್ತಿತ್ತು. ರೆಮೋನಾ ಅವರ ಸಾಧನೆಯನ್ನು ವಿವಿಧ ಗಣ್ಯರು ಅಭಿನಂದಿಸಿದ್ದಾರೆ.

Udayavani 30-7-2025


# ರೆಮೋನಾ ಪಿರೇರಾ ಅವರಿಗೆ ಕೆಥೋಲಿಕ್ ಸಭಾ ಅಭಿನಂದನೆ

**ಮಹಾನಗರ, ಜು. 29:** ಏಳು ದಿನಗಳ ಕಾಲ ನಿರಂತರ ನೃತ್ಯದೊಂದಿಗೆ 170 ಗಂಟೆ ಸತತವಾಗಿ ಭರತನಾಟ್ಯ ಪ್ರದರ್ಶನ ನೀಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್‌ನಲ್ಲಿ ಹೆಸರು ದಾಖಲಿಸಿದ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಅಂತಿಮ ಬಿ.ಎ. ವಿದ್ಯಾರ್ಥಿನಿ ರೆಮೋನಾ ಎವೆಟ್ ಪಿರೇರಾ ಅವರನ್ನು ಕೆಥೋಲಿಕ್ ಸಭಾ ಮಂಗಳೂರು ಪ್ರದೇಶ್ ಅಭಿನಂದಿಸಿದೆ. ರೆಮೋನಾ ಅವರಿಗೆ ಈ ಸಾಧನೆ ಮಾಡಲು ಅವಕಾಶ ಮಾಡಿಕೊಟ್ಟ ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯ ಹಾಗೂ ನೃತ್ಯ ಶಿಕ್ಷಕಿ ವಿದ್ಯಾ ಮುರಳೀಧರ್ ಅವರಿಗೂ ಕೃತಜ್ಞತೆ ಎಂದು ಕೆಥೋಲಿಕ್ ಸಭಾ ಮಂಗಳೂರು ಪ್ರದೇಶ್ ಕೇಂದ್ರೀಯ ಸಮಿತಿಯ ಅಧ್ಯಕ್ಷ ಸಂತೋಷ್ ಡಿ'ಸೋಜಾ ಮತ್ತು ಪದಾಧಿಕಾರಿಗಳು ತಿಳಿಸಿದ್ದಾರೆ.


ನಿರಂತರ 7 ದಿನ ಭರತನಾಟ್ಯ...
ವಿಶ್ವದಾಖಲೆಗೈದ ಮಂಗಳೂರಿನ
ರೆಮೋನಾ ಪಿರೇರಾ
ಉದಯವಾಣಿ
ಜನಮನದ ಜೀವನಾಡಿ


CONSUMER CONNECT INITIATIVE
ರೆಮೋನಾ ವಿಶ್ವ ದಾಖಲೆ
• ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ • ಸಾಧನೆಯಲ್ಲ ಇದು ವಿಸ್ಮಯ
7 ದಿನ
170 ಗಂಟೆ
10200 ನಿಮಿಷ
ರೆಮೋನಾ ಸಾಧನೆಗೆ ಭವ್ಯ ಸ್ವಾಗತ
ರೆಮೋನಾ ನೃತ್ಯದ ವೈಶಿಷ್ಟ್ಯಗಳು
ಸಾಧನೆಗಳು
ಭಾವುಕರಾದ ನೃತ್ಯಗುರು, ತಾಯಿ
ಪ್ರಧಾನಿಯಿಂದ ಮೆಚ್ಚುಗೆ ಪಡೆದ ಬಾಲ ಪ್ರತಿಭೆ
'ರೆಮೋನಾ ವಿಶ್ವದಾಖಲೆ' ಸಾಧನೆಗೆ ಅಭಿನಂದನೆ ಸಲ್ಲಿಸುವ...
ಐವನ್ ಡಿಸೋಜ
ವೇದವ್ಯಾಸ್ ಕಾಮತ್
ಡಾ. ಭರತ್ ಶೆಟ್ಟಿ
ST ALOYSIUS
PRE-UNIVERSITY COLLEGE
Kodialbail, Mangaluru
Forming Men and Women for and with Others
S.L.SHET
Jewellers & Diamond House
ROHAN CORPORATION
Mangalore
Rohan Monteiro
ROY
LOUIS J. PINTO
Mangalore
KEVIN MARTIS
AND FAMILY
URWA, MANGALORE
BUY ONE TAKE ONE FREE
SAURASHTRA CLOTH STORES
SAURASHTRA UNIFORMS
Anand Travels


INCREDIBLE
TULUNAD
PRIDE OF
MANGALORE
Incredible Tulunad
BREAKING RECORDS!
REMONA EVETTE PEREIRA'S INCREDIBLE
170-HOUR BHARATANATYAM PERFORMANCE


ST ALOYSIUS
(DEEMED TO BE UNIVERSITY)
MANGALURU 575 003 - INDIA
PRIDE OF
MANGALORE
CONGRATULATIONS
REMONA EVETTE PEREIRA